ಮಡಿಕೇರಿ ದಸರಾ ಜನೋತ್ಸವ ಬಹುಭಾಷಾ ಕವಿಗೋಷ್ಠಿ ಸಮಿತಿ - 2010

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ



# ಕವಿತೆಗಳ

# ಕವಿತೆಗಳ ಸಾಲುದೀಪ

(ಬಹುಭಾಷಾ ಕವನ ಸಂಕಲನ)

ಮಡಿಕೇರಿ ಜನೋತ್ಸವ

ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ - ೨೦೧೦

೧೦-೧೦-೨೦೧೦

**KAVITHEGALA SAALU DEEPA**

An anthology of poems published by Madikeri Dasara Bahubasha Kavigosti Samithi - 2010

# ಕವಿತೆಗಳ ಸಾಲುದೀಪ

ಮಡಿಕೇರಿ ಜನೋತ್ಸವ ದಸರಾ ಸಂದರ್ಭ ಬಹುಭಾಷಾ ಕವಿಗೋಷ್ಠಿ ಸಮಿತಿ ಮತ್ತು ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ವತಿಯಿಂದ ಪ್ರಕಟಿಸಲಾದ ಕವನ ಸಂಕಲನ


ಪುಟಗಳು :

ವಿನ್ಯಾಸ ಮತ್ತು ರೇಖಾ ಚಿತ್ರಗಳು : ದಿನೇಶ್ ಕುಕ್ಕುಜಡ್ಕ

ಮುದ್ರಕರು : ಶಕ್ತಿ ಪ್ರಿಂಟರ್ಸ್
ಕೈಗಾರಿಕಾ ಬಡಾವಣೆ
ಮಡಿಕೇರಿ - 571 201
☎: 228829, 229202

# ಕವಿತೆಗಳ ಸಾಲುದೀಪ ...

"ಕವಿತೆ, ನೀನೇಕೆ ಪದಗಳಲ್ಲಿ ಅವಿತೆ?" ಎನ್ನುವುದು ಎನ್ಕೆ ಅವರ ಒಂದು ಪ್ರಸಿದ್ಧ ಹಾಯ್ಕು! ಒಂದು ರೀತಿಯಲ್ಲಿ ಭಾವನೆಗಳನ್ನು ವ್ಯಕ್ತಪಡಿಸುವ ಅನೇಕ ಮಾಧ್ಯಮಗಳಲ್ಲಿ ಕವನ ಪ್ರಕಾರವೂ ಒಂದಾಗಿದೆ. ಒಂದು ಭಾವಚಿತ್ರ ನೂರು ಪದಗಳನ್ನು ಹೇಳುವಂತೆ, ಒಂದು ಕವಿತೆ ನಮ್ಮ ಮುಂದೆ ಅನೇಕ ಭಾವನಾ ಲೋಕವನ್ನು ತೆರೆದಿಡಬಲ್ಲುದು.

ಈ ಬಾರಿಯೂ ಮಡಿಕೇರಿ ದಸರಾ ಬಹುಭಾಷಾ ಕವಿಗೋಷ್ಠಿಯ ಕವನ ಸಂಕಲನವಾಗಿ 'ಕವಿತೆಗಳ ಸಾಲುದೀಪ' ನಿಮ್ಮ ಮುಂದಿದೆ. ಮೈಸೂರು ದಸರಾ ಬಿಟ್ಟರೆ ಮಡಿಕೇರಿ ದಸರಾ ರಾಜ್ಯ ಪ್ರಸಿದ್ಧಿ. ಮೈಸೂರು ದಸರಾ ಹಗಲಿನಲ್ಲಿ ನಡೆದು, ಜಂಬೂ ಸವಾರಿಯೊಂದಿಗೆ ಸಮಾರೋಪಗೊಂಡರೆ, ಮಡಿಕೇರಿಯಲ್ಲಿ ಇರುಳು ಹಗಲಾಗಿ ಅಲ್ಲಿ ದೇವಧಾನವರ ಯುದ್ಧ-ಮೆರವಣಿಗೆ ದೃಶ್ಯಗಳು ಮಂಟಪಗಳ ವೈಭವದಲ್ಲಿ ಮೇಳೈಸುತ್ತದೆ.

ದಸರಾ ಅಂಗವಾಗಿನ ಬಹುಭಾಷಾ ಕವಿಗೋಷ್ಠಿ ತನ್ನದೇ ಆದ ರೀತಿಯಲ್ಲಿ ಪ್ರಾಶಸ್ತ್ಯವನ್ನು ಪಡೆದಿದ್ದು, ಅವುಗಳನ್ನು ಸಂಕಲನವನ್ನಾಗಿಸುವ ಮೂಲಕ ಈ ಭಾವನೆಗಳನ್ನು ಶಾಶ್ವತವಾಗಿ ಹಿಡಿದಿಡುವ ಕೆಲಸಕ್ಕೆ ಕೆಲವು ವರ್ಷಗಳಿಂದ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯು ಕೈ ಜೋಡಿಸಿದೆ. ಈ ಬಾರಿಯೂ ಕೂಡಾ, ಅಕಾಡೆಮಿ ನೆರವು ನೀಡಿದ್ದು, ಕವಿತೆಗಳ ಸಾಲುದೀಪ ನಿಮ್ಮ ಮುಂದಿದೆ.

ಈ ಬಾರಿಯೂ ಅಯ್ಕೆಗಾಗಿ ಸಾಕಷ್ಟು ಕವಿತೆಗಳು ಬಂದಿದ್ದರೂ ಕೂಡಾ ಮಿತಿಯ ಹಿನ್ನೆಲೆಯಲ್ಲಿ ಆಯ್ಕೆಯ ಪ್ರಶ್ನೆ ಎದುರಾದಾಗ ಸಾಕಷ್ಟು ಕವಿತೆಗಳು ಹಿಂದೆ ಉಳಿದವು. ಮುಖ್ಯವಾಗಿ, ರೈತ, ಪ್ರಕೃತಿ, ದಸರಾ, ಯೋಧರುಗಳು, ಯೋಧರನ್ನು ಅವಲಂಭಿಸಿದವರ ಬದುಕು, ಮಕ್ಕಳ ಭಾವನೆಗಳ ಲೋಕ ಕುರಿತಾದ ಕವಿತೆಗಳು ಇಲ್ಲಿ ಸಂಕಲಿತಗೊಂಡಿವೆ. ಇಲ್ಲಿರುವ ಕವನಗಳು ಶ್ರೇಷ್ಠವಾದುವು ಆಯ್ಕೆಗೊಳ್ಳದಿರುವುದು ಕನಿಷ್ಠ ಎಂಬ ಭಾವನೆ ಇಲ್ಲ. ಪ್ರಯತ್ನಗಳಿಗೆ ಬೆನ್ನುತಟ್ಟುವ ಕೆಲಸ ಇಲ್ಲಿ ಆಗಿದೆ.

ಅನುಭವ, ಓದು, ಸುತ್ತಲಿನ ಸಾಮಾಜಿಕ, ರಾಜಕೀಯ ಆಗುಹೋಗುಗಳ ಹಿನ್ನಲೆಯಲ್ಲಿ ನಮ್ಮಲ್ಲಿ ಮೂಡುವ ಭಾವನಾ ಲೋಕಗಳಿಗೆ ಅಕ್ಷರ ರೂಪ ನೀಡಿದಾಗ ಅದು ಕತೆಯೋ, ಕವಿತೆಯೋ, ಪ್ರಬಂಧವೋ, ನಾಟಕವೋ ಆಗಿ ರೂಪು ತಳೆಯಲು ಸಾಧ್ಯವಿದೆ.

ಯಾವ ಸಂಗತಿಯನ್ನು, ಯಾವ ಮಾಧ್ಯಮದ ಮೂಲಕ ಹೇಳಿದರೆ ಚೆನ್ನ ಎಂಬ ತೀರ್ಮಾನ, ಆ ಸಾಮರ್ಥ್ಯ ನಮ್ಮದಾದಾಗ ನಮ್ಮ ಭಾವನೆ, ಎಲ್ಲರ ಭಾವನೆಗಳಿಗೂ ತಾಕಿ, 'ಹೌದಲ್ವ' ಎನಿಸಿದರೆ ಈ ಪ್ರಯತ್ನ ಸಾರ್ಥಕ ಎಂಬ ನಂಬಿಕೆ ನಮ್ಮದು.

ಅಂಥಹ ಎಳೆಗಳನ್ನು ಸೇರಿಸಿ, ಇಲ್ಲಿ ಕವಿತೆಗಳ ಸಾಲುದೀಪವನ್ನು ಹಚ್ಚಿದೇವೆ. ಈ

ದೀಪದ ಬೆಳಕಿನಲ್ಲಿ ಇನ್ನಷ್ಟು ಸುಂದರವಾದ, ಜ್ಞಾನ ಪ್ರಚೋದಕವಾದ ಸಾಲುದೀಪಗಳು ಮುಂದುವರಿಯಲಿ ಎಂಬದು ನಮ್ಮ ಆಶಯ

ಕವಿತೆಗಳ ಸಾಲುದೀಪ ಎಂಬ ಸುಂದರ ಶೀರ್ಷಿಕೆ ನೀಡಿದ ಮೈಸೂರಿನ ಪ್ರಜಾವಾಣಿಯ ಮಿತ್ರ ಶ್ರೀ ಸುದೇಶ್ ದೊಡ್ಡಪಾಳ್ಯ, ಕವನ ಸಂಕಲನಕ್ಕೆ ಅಂದವಾದ ಮುಖಪುಟ, ರೇಖಾಚಿತ್ರ ಒದಗಿಸಿದ ಕಲಾವಿದ ಮಿತ್ರ ಶ್ರೀ ದಿನೇಶ್ ಕುಕ್ಕುಜಡ್ಕ, ಸಂಕಲನವನ್ನು ಸುಂದರವಾಗಿ ಮುದ್ರಿಸಿದ ಶಕ್ತಿ ಪ್ರಿಂಟರ್ಸ್ ಬಳಗಕ್ಕೆ, ಕವಿತೆಗಳ ಆಯ್ಕೆದಾರರಾದ, ಶ್ರೀ ಬಿ.ಸಿ. ದಿನೇಶ್, ಶ್ರೀ ಕುಡೆಕಲ್ ಸಂತೋಷ್, ಶ್ರೀಮತಿ ಶಾರದ ನಂಜಪ್ಪ, ಶ್ರೀಮತಿ ಪ್ರಿಯಾ ರವಿಕುಮಾರ್ ಅವರುಗಳಿಗೂ ಆಭಾರಿ.

ಕವಿತೆಗಳ ಸಾಲುದೀಪ ಮೂಡಿಬರಲು ಕಾರಣರಾದ ದಸರಾ ಸಮಿತಿ ಅಧ್ಯಕ್ಷ ಶ್ರೀ ಪಿ.ಡಿ. ಪೊನ್ನಪ್ಪ, ಕಾರ್ಯಾಧ್ಯಕ್ಷ ಶ್ರೀ ಎಸ್.ಸಿ. ಸುಬ್ರಮಣಿ, ದಸರಾ ಸಮಿತಿಯ ಎಲ್ಲಾ ಪದಾಧಿಕಾರಿಗಳಿಗೆ, ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷೆ ಐಮುಡಿಯಂಡ ರಾಣಿ ಮಾಚಯ್ಯ, ರಿಜಿಸ್ಟ್ರಾರ್ ವಿನೋದ್‌ಚಂದ್ರ ಅವರಿಗೂ ಕವಿಗೋಷ್ಠಿ ಸಮಿತಿ ಪರವಾಗಿ ಕೃತಜ್ಞತೆಗಳು.

ಕವಿಗೋಷ್ಠಿ ಯಶಸ್ವಿಗೆ ನನ್ನೊಂದಿಗೆ ದುಡಿದ ಸಮಿತಿ ಸಂಚಾಲಕ ಎಸ್.ಜಿ. ಉಮೇಶ್, ಬಿ.ಸಿ. ದಿನೇಶ್, ಸದೇಶ್ ಕಾರ್ಮಾಡ್, ಅಜ್ಜಮಾಡ ರಮೇಶ್ ಕುಟ್ಟಪ್ಪ, ಕಾಯಪಂಡ ಶಶಿ ಸೋಮಯ್ಯ, ಜಗದೀಶ್ ಬೆಳ್ಯಪ್ಪ, ಹೆಚ್.ಎಸ್. ಮಂಜುನಾಥ್, ಶ್ರೀಧರ್ ಹೂವಲ್ಲಿ, ಎಸ್.ಕೆ. ಲಕ್ಷ್ಮೀಶ್, ಶಿವರಾಂ, ಜಿ.ವಿ. ರವಿಕುಮಾರ್, ಅನುಕಾರ್ಯಪ್ಪ, ಟಿ.ಕೆ. ಸಂತೋಷ್, ಕೆ.ಬಿ. ಮಹಂತೇಶ್, ಕೆ. ತಿಮ್ಮಪ್ಪ, ಗಿರಿಧರ್, ಗೀತಾ, ಸವಿತಾ ಅವರುಗಳಿಗೆ ಧನ್ಯವಾದಗಳು.

ಕವಿಗೋಷ್ಠಿಯಲ್ಲಿ ಪಾಲ್ಗೊಂಡು ಕವಿತೆಗಳ ಸಾಲುದೀಪದಲ್ಲಿ ಅವಕಾಶ ಪಡೆದ ಎಲ್ಲಾ ಕವಿಮಿತ್ರರಿಗೂ, ಕವಿ ಮನಸ್ಸುಗಳಿಗೆ ಅಭಿನಂದನೆಗಳೊಂದಿಗೆ,

*ತಮ್ಮ ವನೇ ಆದ*

**ಅನಿಲ್ ಹೆಚ್.ಟಿ.**, *ಅಧ್ಯಕ್ಷ*

**ಮಡಿಕೇರಿ ಬಹುಭಾಷಾ ದಸರಾ ಕವಿಗೋಷ್ಠಿ 2010**

# ಪರಿವಿಡಿ

## ಆಹ್ವಾನಿತ ಕವನ


| | | |
|---|---|---|
| 1 | ಜಮ್ಮ ಬಾಣೆ | 1-2 |
| 2 | ಗುರುತು | 3-4 |
| 3 | ಕಾಲಜ್ಞಾನಿ | 5 |


## ಕನ್ನಡ ಕವನ


| | | |
|---|---|---|
| 4 | ಐಟಿ - ಬಿಟಿಗಳ ಬೆನ್ನೇರಿ | 6-7 |
| 5 | ಮಡಿಕೇರಿ | 8 |
| 6 | ಶಿಕ್ಷಕ | 9 |
| 7 | ನಾನು ಬರೆಯುತ್ತೇನೆ | 10-11 |
| 8 | ನಿರ್ಲಿಪ್ತ ಬದುಕು | 12 |
| 9 | ಪ್ರಣಯ ಮಳೆ | 13 |
| 10 | ಡಾ. 'ರಾಜ್'ಗೆ ನಮನ... | 14-16 |
| 11 | ಘೋರ ದೃಶ್ಯ | 17 |
| 12 | ಕಾರಣ ಇಷ್ಟೇ... | 18-19 |
| 13 | ಬೆಡಗಿನ ಕೊಡಗು | 20 |
| 14 | ಗುರುವೇ ನಮಃ | 21 |
| 15 | ಕಾಣೆಯಾಗಿದ್ದಾರೆ | 22-23 |
| 16 | ಸಹಿಸಿ ಬಾಳುವುದೆಂದರೆ | 24 |
| 17 | ಪ್ರೇಮ ಕವನ | 25 |
| 18 | ರೈತ | 26-27 |
| 19 | ಪ್ರೀತಿ ಮೂಡುವ ಹೊತ್ತು | 28 |
| 20 | ಸಂಗಾತಿ | 29 |


## ಕೊಡವ ಕವನ


| | | |
|---|---|---|
| 21 | ಕೊಡಗ್ ಬೋಜ | 30 |
| 22 | ಕೊಡಗ್‌ರ ಕಾಡ್ | 31 |
| 23 | ನೊಂಬಲ-ಮನತ್ ದುಂಬ್‌ನ ನೊಂಬಲ | 32-33 |
| 24 | ಕಲ್ಪನೆರ ಲೋಕತ್ | 34 |
| 25 | ಐನ್‌ಮನೆ | 35 |
| 26 | ವೀರ ಯೋಧರೆ | 36 |

# ಪರಿವಿಡಿ


27 ಕುಂದ್ ದೇವಿಡ ಮಂದ್‌ಲಿಂದ್ 37-38

**ಅರೆಭಾಷೆ ಕವನ**

28 ಹೂ ಮಳೆ 39

29 ಕುಲಗೆಟ್ಟ ವ್ಯವಸ್ಥೆ 40

30 ಹೆಣ್ಣ್ 41

31 ಕಾಯ್ತಾವಳೆ ಅವಳಿಗಾಗಿ ... 42

**ಕುಂಬಾರ ಭಾಷೆ ಕವನ**

32 ನೀರು 43

**ಮಲೆಯಾಳಿ ಕವನ**

33 ಯಕ್ಷಿ ಪರಂಬ್ 44-45

**ತುಳುಭಾಷೆ ಕವನ**

34 ಕವನ 46

35 ಬಲೆ ದಸರೋಗು 47

36 ಸೋರ್ಕುದ ಗೋಣೆ !!! 48

**ತೆಲುಗು ಕವನ**

37 ನೇನೂ ಮನಿಷಿ ಕದಾ! 49

**ಚುಟುಕಗಳು**

38 ಹುದ್ದೆ, ಪ್ರಾಣ ಸಖಿ, ಅಹಂಕಾರ, ಬಂತು ಕ್ಲಾಸಿನಲ್ಲಿ ನಿದ್ದೆ, ಬದುಕುವ ಕಲೆ, ಜೀವನ, ಎಲೆಕ್ಷನ್ 50-51

**English Poems**

39 The Power of the Invisible 52

40 We Surely will succeed 53

41 'Ever Green Teacher' 54

42 Flower 55

**हिन्दि कवन**

43 बादल की बारिश 56

ಆಹ್ವಾನಿತ ಕವನ



# ಜಮ್ಮ ಬಾಣೆ

ಜಗತ್‌ಕ್ ಒರೇ ಕೊಡಗ್, ಜಮ್ಮ ಬಾಣೆ ಪೊಮ್ಮಾಲೆ ಕೊಡಗ್
ಅದೇ ನಂಗಡ ಜಮ್ಮ ಕೊಡಗ್ ಜನ್ಮ ಕೊಡಗ್
ಬಾಣೆ ಬೇಲ್‌ಲ್ ಬೊಳಂದದೇ ನಂಗಡ ಬಾಳ್‌ರ ಸೊತ್ತ್
ಅದೇ ಕೊಡಗ್‌ರ ತೋಕ್ ಕತ್ತಿ ಪರಂಪರೆ ಸಾಸತ್‌ರ ಗತ್ತ್.

ಕೊಡಗ್‌ರ ಗಾಳಿ ಸತ್ಯ ಸಾಧನೆ ಗಾಳಿ
ಗಾಳಿಕ್ ಏವ ಧೂಳೇ ಧರ್ಮ ಕರ್ಮ ರಕ್ಷಕ
ಕೊಡಗ್‌ರ ನೀರ್‌ಲ್ ಒಕ್ಕುವ ತೀರ್ಥವೇ ಪ್ರೀತಿ ಪ್ರೇಮ ಸಾಗರ
ನಂಗಡ ಸಾಸ್ವತವೇ ಸನಾತನ ಪವಿತ್ರ ಚಿರಾಯು ಬೆಂದೂರ್ತ.

ಕಾಫಿ, ಯಾಲ, ನಲ್ಲಮಳು, ನೆಲ್ಲ್ ಪುಳಿರ ನಾಡ್
ಭೂಮಿತಾಯಿ ಸದಾ ಪಚ್ಚೆಯಾಯಿತೇ ಇಪ್ಪ ನಾಡ್
ನರಿ, ಕಾಟಿ, ಆನೆ, ಕಡಮ, ಮಿಗ ಓಡಾಡುವ ನಾಡ್
ಕಾವೇರಿ ತೀರ್ಥರೂಪಿಣಿ ಉಕ್ಕಿತ್ ಒಕ್ಕುವ ಮಲೆ ಸಿರಿ ನಾಡ್.

ನೀತಿ, ನ್ಯಾಯ, ಧರ್ಮ ನಂಗಕ್ ಪೆತ್ತ ಅವ್ವಯ್ಯ
ಪ್ರಾಮಾಣಿಕತೆ ನಂಗಕ್ ಬಾಕುವ ಅಪ್ಪಯ್ಯ
ಶಾಂತಿಯೇ ನಂಗಕ್ ಕಳಿಪ ಅಕ್ಕ ತಂಗೆಯ
ಧೈರ್ಯ ಸಾಸವೇ ನಂಗಕ್ ಅಣ್ಣ ತಮ್ಮಣಂಗ

ಕರ್ನಾಟಕತೆ ಕೊಡಗ್ ಒರ್ ಚುಮ್ಮಿ ಜಿಲ್ಲೆ
ಏದೋರ್ ಅಭಿವೃದ್ಧಿ ಕಾಣತ ಕೇಕತ ಜಿಲ್ಲೆ
ಕೊಡಗ್ ಜನ ನೈಚ ಸಂಪಾದನೆ ಜಮ್ಮ ಬಾಣೆ
ರಾಜಂಗ ಒಮ್ಮತ ತಾತ್ ಬ್ರಿಟಿಷ್‌ಕಾರ ಅನ್‌ಕ್‌ಲೆ.

ಇಂಜ ಸೌಕರ್ಯ ಪಾಳಾಕುವ ಸರ್ಕಾರಿ ಕಾನೂನ್ ಬಾತ್
ಜನ ಎದ್ದಂತೆ ಒಂದಾಯಿ ಕೂತ್‌ಟ್ಟ್ ಗುಡ್‌ಗ್‌ಚಿ
ಒಕ್ಕಿ ಬಂದ ಜನಡ ರಭಸಕ್ ಕೆಣೆರ ಬರವಸೆ ತಾತ್
ಅಂದಿತೂ ಜಮ್ಮ ಬಾಣೆ ನಂಗಕ್ ಸಾಶ್ವತ ಆಯಿಲೆ.

ಕರ್ನಾಟಕ ಸರಕಾರತ್‌ನ ನಂಬಿತೆನ್ನ್. ಸುಕ
ಇಂದಲ್ಲ ನಾಳೆ ನಂಗಳ ಚದಿಪದ್ ನೇರ್
ನಂಗಡ ಹಕ್ಕ್‌ಕ್ ರಾಸ್ಟ್ರೀಯ ಮನ್ನಣೆ ಬೋಂಡು.
ಅದಿಲ್ಲೇಂಗಿ ನಂಗಕ್ ಉಳಿಗಾಲ ಇಲ್ಲೆ, ಸರ್ವ ನಾಶ.

ತಲ ಕಾವೇರಿ ಅಭಿವೃದ್ಧಿ ಪ್ರವಾಸಿಕಾರಕ್ ಆಚಿ
ವಂಶ ಪಾರಂಪಿಕ ಶಿಸ್ತ್, ಗತ್ತ್ ಕಾಣತಾಚಿ
ಪ್ರವಾಸಿ ಸ್ಥಾನಕ್ ಕ್ಷೇತ್ರ ಪವಿತ್ರತೆ ಬಲಿಯಾಚಿ
ಚಾಯಿ ಚಂದತ್‌ರ ಆಸೆಲ್ ಭಾಗ್ಯ ಬರ್ಕತ್ ಕಾಣತಾಚಿ.

ಕೊಡಗ್ ಮರಕಾಡ್‌ರ ನಾಡ್ ಪ್ರಾಣಿ ಪಕ್ಷಿಯಡ ಗೂಡ್
ಇಂದ್ ಕಾಡ್, ಪೊಣೆ, ನೀರ್ ಕಮ್ಮಿಯಾಚಿ ಆನೆ ನರಿ ಊರ್‌ಲಾಚಿ
ನಟ್ಟ ಬೊಳೆ ಆನೆಕಾಚಿ, ಇಟ್ಟಪಣ ಸಾಲಕಾಚಿ
ಅಂದಿತೂ ತೀರತ ಸಾಲಕ್ ಗೋಷಣೆ ಆಚಿ ಸಾಲ ಮನ್ನಕ್.

ಕೊಡಗ್ ಕೊಡಗಾಯಿತೇ ಇರಡ್ ಕರ್ನಾಟಕತ್‌ರ ಅಭಿವೃದ್ಧಿ ಎನ್ನಂಗ್
ನಂಗಡ ಜಮ್ಮ ಬಾಣೆ ನಂಗಕೇ ಇರಡ್ ಪರಭಾರೆ ಆಕತಿರಡ್
ಓ ದೇವಿ ಕಾವೇರಮ್ಮೆ ಇಗ್ಗುತಪ್ಪ ಕೈಪುಡ್‌ಚಿ ಕಾಪಾಡೆಂಗಳ
ನಿಂಗಡ ಆಶೀರ್ವಾದತ್ ನಂಗಡ ನಾಡ್ ನಂಗಡದಾಯಿತೇ ಇರಡ್.

**- ಚೇಂದ್ರಿಮಾಡ. ಗ ಮುತ್ತಪ್ಪ, ಕುಶಾಲನಗರ**

ಆಹ್ವಾನಿತ ಕವನ



# ಗುರುತು

ಮಾದಿಗರಕೇರಿಯಲ್ಲಿ ನಡೆದು ಬಂದ ಮಾದೇವ
ಅಳಿಯಲಿಲ್ಲ ಶತ, ಶತಮಾನಗಳ ಮನದೊಳಗಿನ ನೋವ
ನಡೆದುಹೋದ ಪಾದುಕೆಗಳ ಸದ್ದಿನ ಹೊರತು
ಉಳಿಯಲಿಲ್ಲ ಅಲ್ಲಿ ಬರಿಗಾಲ ಬೆರಳಿನ ಹೆಜ್ಜೆ ಗುರುತು!

*ಶೋಭೆ*

ನಗುನಗುತ್ತಾ ನೀನಿದ್ದರೆ ಪಕ್ಷದೊಳಗೆ ಶೋಭೆ
ವಿರೋಧಪಕ್ಷದವರೇ ಕೂರಿಸಬೇಡಿ ಹಿರಿಯಕ್ಕನ ಮೇಲೆ ಗೂಬೆ
ಪಕ್ಷದ ಚೈತನ್ಯಕ್ಕೆ ನೀನೇ ಮಾಲಿನ್ಯರಹಿತ ಇಂಧನ
ಅದಕ್ಕಾಗಿ ಹೋರಾಡಿ ಮಾಡಿದ್ದು ನಿನ್ನ ಮರುಬಂಧನ!

*ಅಡಿಪಾಯ*

ಲೋಕಾಯುಕ್ತರು ಬಂದಾಗ ಗೊತ್ತಾಗಲಿಲ್ಲವೇ ಕಟ್ಟಾ
ಅಪ್ಪನ ಮುಖಕ್ಕೆ ಬೇಗ ಮಸಿ ಬಳಿದುಬಿಟ್ಟ
ಮಂತ್ರಿ ಮಾಗಧರಿಗೆ ನೋಡಿ ಇಂಥ ಮಕ್ಕಳು ಹುಟ್ಟಿ
ಮಾಡಿಕೊಳ್ಳಲು ಆಗುವುದಿಲ್ಲ ರಾಜಕೀಯದ ಅಡಿಪಾಯ ಗಟ್ಟಿ!

*ಹುಡುಕಾಟ*

ಸಿದ್ಧರಾಮಯ್ಯಗೆ ಒಂದೆಡೆ ಆರಾಮವಾಗಿ ಕೂತು
ಹುಡುಕಬೇಕಂತೆ ಬಿ.ಜೆ.ಪಿ. ತಟ್ಟೆಯಲ್ಲಿರುವ ದೋಣಿಯಲ್ಲಿನ ತೂತು
ಬಳ್ಳಾರಿ ಪಾದಯಾತ್ರೆ ಮುಗಿಸಿ ಕಾಲಿಗೀಗ ಪುರುಸೊತ್ತು
ವೈದ್ಯರು ಹೇಳಿದ್ದಾರೆ ಈಗ ಕೈಗೆ ಆಗಬೇಕಂತೆ ಕಸರತ್ತು!

ನೆಮ್ಮದಿ

ವಿಶಾಲಾಕ್ಷಮ್ಮ ಸೇರಿದರು ಧರ್ಮಸ್ಥಳ ಸಂಘ
ಮನೆಮಂದಿ ಮಕ್ಕಳಿಗೆಲ್ಲಾ ಬಟ್ಟೆ ಬರೆ ಲಂಗ
ಕುಡಿದು ತೂರಾಡಿ ಮನೆಗೆ ಬರುತ್ತಿದ್ದ ಗಂಡ
ನೆಮ್ಮದಿಯಿಂದ ಓಡಿಸುತ್ತಾನೆ ಈಗ ಹೀರೋ ಹೋಂಡಾ!

*ಹಂದಿ*

ಅಂತರ್ಮುಖಿಯಾಗಿ ಒಮ್ಮೆ ಜೀವನದ ಒಳಹೊಕ್ಕು
ಜಾತಿವರ್ಣಗಳ ಬಗ್ಗೆ ಕಚ್ಚಾಡುವರ ಕಂಡು ನಕ್ಕು
ಕೊಚ್ಚೆಯಲ್ಲಿ ಬಿದ್ದು ಒದ್ದಾಡುವ ಹಂದಿ
ಗುರುಗುಟ್ಟಿ ಗಂಜಿ ಕುಡಿದಂತೆ ಈ ರಾಜಕೀಯದ ಮಂದಿ!

*ತೀರ್ಪು*

ಅಯ್ಯೋ... ಎನ್ನದೆ
ಚೋದ್ಯವಾಗದೆ...
ಬಾಂಧವ್ಯಕ್ಕೆ ಸಿಕ್ಕಿ
ಜಯ ಅಯ್ಯೋಧ್ಯ!!

*ಗೂಳಿಹಟ್ಟಿ*

ಗೂಳಿ ಹಟ್ಟಿ ಬಿಟ್ಟು ಓಡಿತು...
ಮೇಯುತ್ತಿದ್ದ ಹಸು ಹಟ್ಟಿ ಸೇರಿತು!!

*ರೆಡ್ಡಿ-ಯಡ್ಡಿ*

ರೆಕ್ಕೆ ಮುರಿದಂತೆ ರೆಡ್ಡಿ...!
ಕಡ್ಡಿ ಮುರಿದಂತೆ ಯಡ್ಡಿ...!

*ಅರವಿಂದ ಲಿಂಬಾವಳಿ*

ರೈಲಿನಿಂದ ಇಳಿದ
ಪ್ರಯಾಣಿಕ!

**- ಹಾ.ತಿ. ಜಯಪ್ರಕಾಶ್, ಸೋಮವಾರಪೇಟೆ**



ಆಹ್ವಾನಿತ ಕವನ

## ಕಾಲಜ್ಞಾನಿ!

ಹಾರಿ ಹಾರಿ ಹಾರಿ ದೂ...ರ ಹಾರಿ
ನೂರಾರ್ ಮೈಲ್ ದೂರ ಹಾರಿ
ಅಂಗಳಲಿ ಕುದ್ದ ಹಕ್ಕಿಗೆ ಗೊತ್ತುಟು
ಚಳಿ ಗಾಳಿ ಮಳೆ ಮಂಜಿ
ದಿಕ್ಕ್ ತಪ್ಪದೆ ಹಾರುವ ಹಕ್ಕಿಗೆ
ಇಷ್ಟೇ ಇಷ್ಟ್ ಮೆದುಳು!

ಕಣ್ಣಿಗೆ ದೃಷ್ಟಿ, ರೆಕ್ಕೆಗೆ ಶಕ್ತಿ
ಹಕ್ಕೀ ನೀ ಅದ್ಭುತ- ಆಕಾಶಕೆ ದೃಷ್ಟಿ ಬೊಟ್ಟು!
ಮೇಲೆ ಅಟ್ಟನ ಇಲ್ಲೆ, ಸುತ್ತ ಗೋಡೆನೂ ಇಲ್ಲೆ
ಕೆಳಗೆ ಆಳ ಪಾತಾಳ ಸಾಗರ ತಳ
ನಿನ್ನ ಕಣ್ಣಿಗೆ ಬರೀ ನೀರ್ ಹನಿ
ಬೆಟ್ಟಗುಡ್ಡ ಪರ್ವತ
ನಿನ್ನ ರೆಕ್ಕೆ ಅಡಿಗೆ ಮರಿ- ಮಣ್ಣ್ ಗುಡ್ಡೆ!
ಜನ ದನ ನಿನ್ನ ಕಣ್ಣಿಗೆ ಪಿಜಿನ್‌ಗ

ಭೂಕಂಪ, ಜ್ವಾಲಾಮುಖಿ ಮಹಾ ಮಾರಿ
ಗುಡುಗು ಸಿಡ್ಲ್ ಬಿರುಗಾಳಿ ಮಳೆ
ಹಕ್ಕೀ ನಿನ್ನ ಮೆದುಳಿಗೆ ಗೊತ್ತುಟು - ನೀ ಕಾಲಜ್ಞಾನಿ!

ಪಿಸಿ ಪಿಸಿ ಗುಸು ಗುಸು ಮನುಷ್ಯನ ಹಣೆಬರ
ಒಬ್ಬೊಬ್ಬ ಒಂದೊಂದು ಜ್ವಾಲಾಮುಖಿಗ
ಮುಖವಾಡ ಹಾಕಂಡ ವಿಷ ಸರ್ಪಗ
ಹಕ್ಕೀ ನೀ ಅದ್ಭುತ-ಆಕಾಶಕೆ ದೃಷ್ಟಿ ಬೊಟ್ಟು
ನಮ್ಮ ನೀ ಬೊಯ್ಯಬೇಡ ದಯವಿಟ್ಟು
ನಾವ್ ಹಿಂಗೇ ಯಾಗೋಳು ...

**- ಬಿ.ಆರ್. ಜೋಯಪ್ಪ, ಮದೆ**



ಕನ್ನಡ ಕವನ

# ಐಟಿ-ಬಿಟಿಗಳ ಬೆನ್ನೇರಿ

ಹೈಟೆಕ್, ಬಿಟೆಕ್ ಸಿಲಿಕಾನ್ ಸಿಟಿಯ ಜನರ ಬದುಕು
ಅನುದಿನವು ಸಹೃದಯಗಳ ಬಿರುಕು.
ಕ್ಷಣಕ್ಷಣವು ತನುಮನಗಳ ತಲ್ಲಣವು ...
ಆದರೂ ಬದುಕುತ್ತಿವರು ಹೀಗೆಯೆ ...

ಪರಿಸರವು ನಂಜಾಗಿ ನಾರುತ್ತಿದೆ ಎಲ್ಲೆಲ್ಲೂ
ಆದರೂ ಒಗ್ಗಿಕೊಂಡ ಬಗೆಯಂತು ಸೋಜಿಗವೆ!
ಸರ್ವರ ಸಹೃದಯಗಳ ದುಗುಡಗಳನ್ನು ತಟ್ಟಿ
ಕುಡಿದು, ಕುಣಿಸಿ, ಕುಣಿಯುವರು ಇರುಳೆಲ್ಲ ಬಾರುಗಳಲ್ಲಿ

ಇಷ್ಟಪಡಲಾರರು ಕಷ್ಟಪಡುವ ಕಾಯಕವ,
ಬಿಟ್ಟುಬರಲಾರರು, ಅನ್ಯಾಯ ಅಧರ್ಮದ ಪಥವ
ಮತ್ತಿನಲ್ಲಿ ಕುತ್ತು ಬಂದೆರಗಿದರೂ, ಕತ್ತಿ, ಖಡ್ಗಗಳನ್ನು
ಝಳಪಿಸುತ್ತಾ ಕಲಹಕ್ಕೆ ಕಾಲ್ಕೆರೆಯುತ್ತಿಹರು.


ಎಡವಟ್ಟುಗಳ ಮಡುವಿನಲ್ಲಿ ಈಜಾಡುತ್ತಾ ...!
ಸತ್ಯದ ಅರಿವಿದ್ದರೂ ಸತ್ತಂತ್ತಿರುವರು ಮನುಜರು.
ಹೈಟೆಕ್ಕು, ಬಿಟೆಕ್ಕುಗಳ ಬೆನ್ನೇರಿದ ದಂಪತಿಗಳು
ಸಾವಿನ ಕುಣಿಕೆಯಲಿ ಕೊರಳಿಟ್ಟು, ಬದುಕುತ್ತಿಹರು.


ನಿತ್ಯದ ಬದುಕಲ್ಲಿ ಶಾಂತಿಯ ನೆಲೆ ಇಲ್ಲ
ಮಧುರ, ಸೌಹಾರ್ದತೆಯ ಸುಳಿವಿಲ್ಲ
ಸರ್ವರ ಸಹಬಾಳ್ವೆಗೆ ಸಂಚಕಾರ ಸಂದಿದ್ದು
ಮರೆಯಾಗಿದೆ ಪ್ರೀತಿ, ಮಮತೆ ಮಮಕಾರದ ಒಡಲು,
ಹೈಟೆಕ್‌ನ ಅಂಧಕಾರದ ಅರಮನೆಯೊಳಿಂದು

ಬಿಟೆಕ್‌ನ ಅಜ್ಞಾನದ ಸಿಂಹಾಸನವೇರಿರುವ ಮನುಜರು
ಮಾನವೀಯ ಸಾಮ್ರಾಜ್ಯಕ್ಕೆ ಕಿಚ್ಚನು ಹಚ್ಚಿ,
ಕ್ರೌರ್ಯ, ಹಿಂಸೆ, ದ್ವೇಷದೊಳು ಕುದಿಯುತ್ತಿಹರು

ಹೈಟೆಕ್‌ನಲ್ಲಿ ಅಮಾಯಕರು ನಿಸ್ಸಾಯಕರಾಗಿ
ಬಿಟೆಕ್ಕಿನಲಿ ಒಳ್ಳೆಯತನದಿಂದ ವಂಚಿತರಾಗಿ
ನಯನಾಜೂಕಿನ ವಿದ್ಯಾವಂತರು ವಿಶ್ವಾಸಘಾತುಕರಾಗಿ
ನಾಗರಿಕತೆ ರಾಜ್ಯದಲಿ ಮರೆಯಾಗಿವೆ ಮೌಲ್ಯಗಳು...

- ಬಿ. ಸಿದ್ದರಾಜು ಬೆಳ್ಳಯ್ಯ, ಮದೆ





# ಮಡಿಕೇರಿ

ಮಡಿವಂತಾರ ಬೀಡು, ಮಡಿಕೇರಿ ನಾಡು
ಚಳಿಗಾಲ ಮಳೆಯದುವೆ ಈ ನಾಡ ಸಿರಿಯು
ಹಸಿರುಡುಗೆ ಹೊದ್ದಿರುವ ಗಿರಿಸಾಲ ನಡುವೆ
ನಗುತ್ತಿತ್ತು ಸೊಬಗಾ ಸೂಸುತಿತ್ತು.

ಮಂಜಾ ಹನಿಗಳ ನಡುವೆ ಮುಂಜಾನೆ ನೇಸರನು
ನಾಚುತಲಿ ನಸುಗೆಂಪು ಕಿರಣವನು ಸೂಸಿದನು
ಮಡಿಕೇರಿ ಜನಮನಕ್ಕೆ ಕಚಕುಳಿಯ ನೀಡುತ್ತಾ
ನಗುತಿದ್ದಾ ರವಿಯು ಬೀಗುತಿದ್ದಾ!! ಮಡಿವಂತಾರ!!

ಅತ್ತಾಬೆಳ್‌ಮುಗಿಲಲ್ಲಿ ಬೆಳ್ಳಕ್ಕಿ ಸಾಲು
ಇತ್ತಾ ಮುಡಿವಂತಾರ ಕನಸು ನೂರಾರು
ಶಾಲೆಯ ಮಕ್ಕಳ ಅಂದಾದ ನಡಿಗೆ
ಸಾಗುತಿತ್ತು ಹಾದಿ ಸಾಗುತಿತ್ತು!! ಮಡಿವಂತಾರ!!

ಮಡಿಕೇರಿ ಅಂದಾಕೆ ಮನಸೋತ ಜನರು
ದೂರಾದ ಊರಿಂದ ಬರುತಾಲೆ ಇಹರು
ಹಳ್ಳಿಯ ಮನೆಗಳ ಆತಿಥ್ಯ ಪಡೆದು
ಹೋಗ್ತಾರು ಮತ್ತೆ ಬರುವಾರು!! ಮಡಿವಂತಾರ !!

ಮಡಿಕೇರಿ ಅರಸಾರ ಅರಮನೆ ಚಂದ
ಅರಮನೆ ಮುಂದಿನ ಆನೆಯು ಚಂದ
ಗದ್ದಿಗೆ ರಾಜಾಸೀಟಿನ ವೈಭವ
ಕರೆದಿತ್ತು ಹತ್ತಿರ ಕರೆದಿತ್ತು!! ಮಡಿವಂತಾರ!!

ಕಾವೇರಿ ಮಾತೆಯ ಮಹಿಮೆಯಾನಂದ
ಬೆಳ್‌ನೊರೆ ಸೂಸುವ ಅಬ್ಬಿಯ ಚಂದ
ಓಂಕಾರೇಶನ ಗಂಟೆಯನಾದ
ಕೇಳ್‌ತಿತ್ತು ದೂರ ಕೇಳ್ತಿತ್ತು!! ಮಡಿವಂತಾರ!!

**- ಕಾಯಪಂಡ ಬಿ. ಟಾಟಾ ಚಂಗಪ್ಪ, ವೀರಾಜಪೇಟೆ**

# ಶಿಕ್ಷಕ

ಶಿಕ್ಷಕ ನೀನಾಗು ವಿದ್ಯಾರ್ಥಿಗಳಿಗೆ ಒಳ್ಳೆಯ ಮಾರ್ಗದರ್ಶಕ
ತರಗತಿಯೊಳಗೆ ನೀ ಕಳೆಯುವ ಪ್ರತಿ ನಿಮಿಷ
ತುಂಬಲಿ ಮಕ್ಕಳಲಿ ಹೊಸ ಹರುಷ

ಮನೆ ಮನೆಯಲ್ಲಿಂದು ಮಗು ತಾನದು ಒಂಟಿ
ಅದಕ್ಕಿಲ್ಲ ಅಕ್ಕ-ತಂಗಿ, ಅಣ್ಣ-ತಮ್ಮ
ತಪ್ಪೆಚ್ಚೆಯ ತಿದ್ದುವ ವ್ಯವಧಾನ ಮಾತಾ-ಪಿತರಿಗಿಲ್ಲ
ಕಂಪ್ಯೂಟರ್, ಟಿವಿ, ಮೊಬೈಲ್‌ಗಳೇ ಅದರ ಸಹಚರ

ತರಗತಿಯೊಳಗೆ ನೀ ನಿರ್ಮಿಸು ಸುಂದರ ಮೂರ್ತಿಗಳ
ಆ ಮೂರ್ತಿಗಳೇ ಭವ್ಯ ಭಾರತದ ಜೀವಾಳ
ಸ್ವಸ್ಥ ಮನಸ್ಸಿನ ವ್ಯಕ್ತಿ ನಿರ್ಮಾಣ ಕಾರ್ಯಕ್ಕೆ
ನೀನೇ ಸಹಾಯಕ, ನಿರೂಪಕ, ಮಾರ್ಗದರ್ಶಕ

ಯುವ ಜನಾಂಗದ ವ್ಯಕ್ತಿತ್ವ ನಿನ್ನಿಂದ ನಿರ್ಮಾಣವಾಗಲಿ
ದೇಶದ ಉತ್ತಮ ಭವಿಷ್ಯ ನಿನ್ನಿಂದ ರೂಪುಗೊಳ್ಳಲಿ
ಎಲ್ಲ ಕ್ಷೇತ್ರಗಳ ಉತ್ತಮರನ್ನು ನೀ ಹುಟ್ಟುಹಾಕು
ದೇಶ ಮುಂದುವರಿಕೆಗೆ ಅವರ ನೀ ಕಲೆಹಾಕು

ಕಾಲ ಹೇಗೇ ಇರಲಿ
ಒಳ್ಳೆಯ ಗುರು-ಒಳ್ಳೆಯ ಗುರಿ
ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಸಹಕಾರಿ
ಅಂತೆಯೇ ಒಳ್ಳೆಯ ಗುರು ನೀನಾಗು
ಸದೃಢ ಸಮಾಜ ಕಟ್ಟಲು ನೆರವಾಗು.

**- ಪದ್ಮಜ ಟಿ.ಎಲ್., ಗೋಣಿಕೊಪ್ಪಲು**



# ನಾನು ಬರೆಯುತ್ತೇನೆ


ಕೈಯಲಿ ಕೋವಿ ಹಿಡಿದು
ಮನದಲಿ ಕುಲದೇವಿಯ ನೆನೆದು
ಬಿಸಿಲ ಬೇಗೆಯಲಿ ಬೆಂದು
ಕಾಡು-ಮೇಡು ಹಿಮ ಕಣಿವೆಯಲಿ ನಡೆದು
ನೆತ್ತರ ಮಡುವಿನಲಿ ಪಾದತೊಳೆದು
ತಾಯ್ನಾಡಿಗಾಗಿ ಮಡಿದು
ಚರಿತ್ರೆಯ ಪುಟ ಸೇರಿದ
ವೀರ ಯೋಧನ ಕಾದಂಬರಿ ನಾನು ... ಬರೆಯುತ್ತೇನೆ.

ಪ್ರಕೃತಿ ವಿಕೋಪಕ್ಕೆ
ವರುಣನಾರ್ಭಟಕ್ಕೆ
ಸಾವು- ನೋವಿಗೆ
ಜಗವೇ ಗೋಳಿಡುತ್ತಿರುವಾಗ
ತುಂಡು-ಗುಂಡಿನಮಲಿನಲಿ
ಗದ್ದಿಗೆಯ ದಾಹದಲಿ
ಮೈಮರೆಯುತ್ತಿರುವ

ಹಣ-ಗುಣದಾಸೆ ತೋರಿಸಿ
ಸ್ವರ್ಗವೇ ಧರೆಗಿಳಿಸಿ
ಮುಗುದೆ ಮನ ಒಲಿಸಿ
ಕಾಮದ ತೆವಲು ತೀರಿಸಿ
ಮುತ್ತೈದೆ ಭಾಗ್ಯವಳಿಸಿ
ಅಹಂನಿಂದ ಮೆರೆಯುತ್ತಿರುವ
ಕಾಮಾಸುರನ 'ಚರಮಗೀತೆ' ನಾನು ... ಬರೆಯುತ್ತೇನೆ.

ಸಪ್ತಪದಿಯ ತುಳಿದು
ಸುಖಬಾಳಿಗೆ ಕಾಲಿಡುವ ಮುನ್ನ
ಕೈಹಿಡಿದ ತಾವರೆ ವಿಧಿಕಸಿದುಕೊಂಡಾಗ
ವೀರಯೋಧನ ವಿಧವೆಯಾಗಿ
ಭೂದೇವಿಗೆ ವಿಧೇಯಳಾಗಿ
ಬಾಳುವ ವೀರವನಿತೆಯ ... ಮಹಾಪ್ರಬಂಧ
ನಾನು ಬರೆಯುತ್ತೇನೆ.

- ಸತೀಶ್ ಕುಮಾರ್, ಚೇರಂಬಾಣೆ





# ನಿರ್ಲಿಪ್ತ ಬದುಕು

ನೀರವತೆಯ ನಿರರ್ಥಕ ಬಾಳಿನಲ್ಲಿ
ಭರವಸೆಯ ಅಪಸ್ವರದ ನಿರ್ಬರ ಗಾಳಿಗೆ
ಜಂಜಾಟದಲ್ಲಿ ಬದುಕಿನ ಕಥೆ

ನನ್ನವರ ನಾ ಅರಿಯದೆ ಹೋದೆ
ಮನ ಮೀಟುವ ಹೃದಯದ ಕಣ್ಣೀರು
ಒಡನಾಡಿಯೊಳು ಚಿಮ್ಮುತ್ತಿದೆ ಚೀತ್ಕಾರ

ಭೂಮಿಯ ಮೇಲೆ ಬದುಕುವ ದಿನಗಳ
ಎಣಿಸಲಾಕೆ ಹೂವಿನ ಹಾಸೆ, ಮುಳ್ಳಿನ ಮೊನೆಯೇ
ನಾ ಕಾಣೆ ಅರಿ ಹೋದ ಕನಸ

ಮಗುವಿನಿಂದಲೂ ಕಾಣಲಿಲ್ಲ ನಿಮ್ಮ ತನುವ
ಹಿತವರು ಚುಚ್ಚಿ ನೋಯಿಸುತ್ತಿರಲು
ಪ್ರೀತಿ, ಪ್ರೇಮದಾಟದಲ್ಲಿ ಬೂದಿಯೊಳು ಬೆಂದೆ

ಅತ್ತು ಕರೆದಾಗ ಮುತ್ತುಣಿಸದ ಪ್ರೀತಿ
ಹಸಿವು ಬಾಯಾರಿಕೆಯಿಂದ ಬಳಲಿ ನೊಂದೆ
ಬಿಸಿಯು ಬೇಗೆ ಇಲ್ಲದೆ ಚಳಿಯಲ್ಲಿ ನಡುಗಿದೆ.

ಈ ಸಮಾಜದಿಂ ಬೇಸತ್ತು
ನೋಡಿ ನಗುವ ಜನರ ಮಧ್ಯದಲ್ಲಿ
ಬಯಕೆ ಬರುವುದೇ ಕಣ್ಸನ್ನೆ ಕಾಣೆ.

ಕಲ್ಲಾದ ಹೃದಯಕ್ಕಿಲ್ಲ ಜೀವ
ಆಸೆ ಆಕಾಂಕ್ಷೆಗಳೆಲ್ಲಾ ನಿರ್ಲಿಪ್ತ
ಏಕಾಂಗಿಯಾದೆ ಜೀವನ ಹಂತದಲ್ಲೊ.

- ಹೇಮಲತಾ ಪೂರ್ಣಪ್ರಕಾಶ್, ಮಡಿಕೇರಿ



# ಪ್ರಣಯ ಮಳೆ

ಬಾಗಿಲ ತೆಗೆ ಕಾಲವೆ...
ಕಾರ್ಗಾಲ ಸಂಧ್ಯೆಯಲಿ ಇಂದ್ರ ನೀಲ ಬಾನಿಂದ
ಪ್ರಣಯ ರಾಜನೆನ್ನರಸಿ ಬರುವನು
ಸ್ವಪ್ನ ರಥವೇರಿ ಕಾಯುತ್ತಿರುವೆ...

ಆಗಮನದ ಸಂದೇಶವಿದ್ದರೂ ಗಾಳಿಯಲಿ
ಆಗಸದಲ್ಲೆಲ್ಲೂ ಭೀತಿಯ ಛಾಯೆ
ಕಾರ್ಮುಗಿಲ ಅದ್ಭುತ ಕಸರತ್ತುಗಳೆಲ್ಲವೂ
ವರುಣ ರಾಜನ ಕೋಪ ಸಂಕೇತಗಳು

ಸಿಡಿಲಿನ ಭರದಲಿ ಬೆಚ್ಚಿ ಬೀಳಿಸುತ
ಗುಡುಗಿನ ಧ್ವನಿಯಲಿ ಬೆದರಿಸುತಾ
ಕಣ್ಣಾ ಮುಚ್ಚಾಲೆಯೇಕೆ ಮೋಡದೊಳ ಹೊಕ್ಕು
ಕೋಪವಿದೇಕೆಂದು ಕೇಳುತ್ತಿರುವೆ ಕೇಳಿಸದೆ ...

ವರ್ಷಧಾರೆಯಾಗಿ ಆಲಿಂಗಿಸಿತೆನ್ನರಸ
ಹನಿ ಹನಿಯಲು ಪ್ರಣಯ ಪಿಸುಗುಟ್ಟುಗಳು
ಕಚಗುಳಿಯಿಡುತಾ ಮೈಮನ ತೊಯ್ದು
ಉಲ್ಲಾಸದ ಉಯ್ಯಾಲಿಯಲಿ ಆಕಾಶ ತಲುಪಿದಂತೆ

ಮಳೆರಾಜನೆನ್ನ ಪ್ರಣಯ ಸಖನಾದರೂ
ಗುಡುಗು ಸಿಡಿಲಿನ ಭೀಕರತೆಯ ಹಾಗೆ
ಪ್ರಣಯ ಮಳೆಯಲು ಕಪಟತನದ ಭೀತಿಯಿದೆ
ಸಾಕ್ಷಿಯದಕೆ ಕಣ್ಮುಚ್ಚಿದ ನಕ್ಷತ್ರಗಳು !

- ಸುನಿತಾ ಲೋಕೇಶ್, ಕುಶಾಲನಗರ



# ಡಾ. 'ರಾಜ್'ಗೆ ನಮನ...

ಗಾಜನೂರಿನಲಿ ಅವತರಿಸಿದ ಯುಗಪುರುಷನಿಗೆ
'ಮುತ್ತುರಾಜ್' ಎಂಬ ಅಭಿದಾನ
ಮಾತಾಪಿತರ ಅಭಯದಂತೆ ಕಲಾರಾಧಕನಿಗೆ
'ರಾಜ್ ಕುಮಾರ್' ಎಂಬ ಅನ್ವರ್ಥನಾಮ ...

ಬಾಲ್ಯದಲ್ಲೆ ಕಲೆಯ ಆರಾಧಕನಾಗಿ
ಪ್ರತಿಭೆಯ ಗಣಿಯಾಗಿ ಆದರ್ಶತೆಯ ಅನುಚರನಾಗಿ
ವ್ಯಕ್ತಿತ್ವ ಅರಳಿತು ಆಲದಮರವಾಗಿ
ಗೆದ್ದಿತು ಕನ್ನಡಿಗರ ಹೃದಯವ ಮಾಯಜಾಲವಾಗಿ ...

ಜೀವನದ ಏರಿಳಿತಗಳನು ಸವೆಸಿ
ಕನ್ನಡ ಚಿತ್ರರಂಗವ ಪ್ರವೇಶಿಸಿ
ಕರುನಾಡ ದೀವಿಗೆ ಬೆಳಗಿಸಿ
ತಾನು ಬೆಳಗಿ ...
ಪರರನ್ನು ಬೆಳಗಿಸಿದ ಧೀಮಂತ ಕಲಿ ... ?

ಸತಿಸುತರಿಗೆ 'ಕಸ್ತೂರಿ ನಿವಾಸ'
'ಹಾಲುಜೇನಿ'ನಂತೆ 'ಜೀವನಚೈತ್ರ'
'ಸಂಪತ್ತಿಗೆ ಸವಾಲೆಸ'ದ 'ಬಂಗಾರದ ಮನುಷ್ಯ'
'ಭಕ್ತಕುಂಬಾರ'ನಂತೆ ಶ್ರಮಿಸಿದ 'ಭಕ್ತವಿಜಯ' ...

'ಭೂಲೋಕದಲ್ಲೇ ಕೈಲಾಸವ' ಕಂಡ 'ಹರಿಭಕ್ತ'
'ರಣಧೀರ ಕಂಠೀರವ'ನಾಗಿ ಘರ್ಜಿಸಿದ 'ಭಕ್ತನಚಿಕೇತ'
'ಅನುರಾಗ ಅರಳಿಸಿ' 'ಧರ್ಮವಿಜಯ'ವ
ಸಾರಿದ 'ಜಗಜ್ಯೋತಿ ಬಸವೇಶ್ವರ'

'ದಶಾವತಾರ'ದ ಮೂಲಕ ದುಷ್ಟರನು
ಸದೆಬಡಿದ 'ಮಹಿಷಾಸುರ ಮರ್ದಿನಿ'
ಪಂಚಕೋಟಿ ಕನ್ನಡಿಗರಿಗೆ 'ಗಂಧದ ಗುಡಿ'ಯ ಕಟ್ಟೆ
'ಧ್ರುವತಾರೆ'ಯಾಗಿ ಪ್ರಜ್ವಲಿಸಿದ ...

'ಪರಮರಾಮ'ನಂತೆ ಪರಾಕ್ರಮ ತೋರಿ
'ಭಕ್ತಕನಕದಾಸನಂತೆ ಬಾಳಿಬೆಳಗಿದ
'ಒಡಹುಟ್ಟಿದವರ'ನ್ನಗಲಿ ...
'ಆಕಸ್ಮಿಕ'ವಾಗಿ ನಡೆದ 'ಕವಿರತ್ನ ಕಾಳಿದಾಸ'ನಂತೆ

ಮೂಕವಿಸ್ಮಿತಳಾಗಿ ಎಲ್ಲವನ್ನು ನೋಡುತ್ತಿದ್ದ
'ಅಬ್ಬಾ ಆ ಹುಡುಗಿ' ಪಾರ್ವತಮ್ಮನನ್ನು ಬಿಟ್ಟು
'ಒಂದು ಮುತ್ತಿನ ಕಥೆ'ಯಾಗಿ 'ಸರ್ವಮಂಗಳ'ವ ಹಾಡಿ
ಕಾಲಪುರುಷನ ಅಂಗಳದೆಡೆಗೆ ಸಾಗಿದೆ.

'ಕಣ್ತೆರೆದು ನೋಡು' ಎಲ್ಲಾ 'ಕೈವಾರ ಮಾಹತ್ಮೆ'
ಎಲ್ಲೆಡೆ ಕವಿದಿದೆ ...?
'ಶಬ್ಧವೇದಿ' ಇಲ್ಲದ ನಿಶ್ಯಬ್ದತೆಯ ಮೌನ ...


ಗೋಕಾಕ್ ಚಳುವಳಿಯ ಹರಿಕಾರನಾಗಿ
ರಸಿಕರಾಜನಾಗಿ ಸಾರ್ವಭೌಮ, ಮೇರುನಟನಾಗಿ
ಮೆರೆದ ಕನ್ನಡ ಕಣ್ಮಣಿಗೆ
ಸಂದವು ಪ್ರಶಸ್ತಿಗಳ ಮಹಾಪೂರ ...

ಒಳಪುಟದ ನೋಡದೆ ಮುಖಪುಟದಲ್ಲೆ ಮಿನುಗಿದ
ತಾರಾಮೌಲ್ಯ ನರಹಂತಕನನು ನಯವಂತನಾಗಿಸಿ
ಪಾರಾಗಿ ಬಂದ ಕನ್ನಡಿಗರ ಆರಾಧ್ಯದೈವ
ಕಲಾವಿದರ ಪರಮೇಷ್ಟಿ ಕಲೆಯಪಯೋ ನಿಧಿ ...

ಜೀವನ ನಾಟಕವ ಮುಗಿಸಿ 'ಬೇಡರಕಣ್ಣಪ್ಪ'ನಂತೆ
ಇಬ್ಬರು ಅಂಧರಿಗೆ ಕಣ್ಮಿಂಚು ನೀಡಿದ
ಕಣ್ಮಣಿಯ ಕಣ್ಣು ...
ಎಲ್ಲವನು ನೆನಪಿನ ಬುತ್ತಿಯಲ್ಲಿಟ್ಟು ಮೇಘವಾದೆ
ಅಭಿಮಾನಿ ದೇವರುಗಳ ಆರ್ಭಟದ ನಡುವೆ ...

"ಹುಟ್ಟು ಉಚಿತ, ಸಾವು ಖಚಿತ
ಜನಬಲವೊಂದೇ ಶಾಶ್ವತ" ಎಂದರು.
ನಗುವಿನರಮನೆಯಿಂದ ...
ಕನ್ನಡ ಸಾರಸ್ವತ ಲೋಕದ ತ್ಯಜಿಸಿ
ಪರಂಧಾಮದ ಸೇರಿದ ಮಹಾಪುರುಷನಿಗೆ
ಪಂಚಕೋಟಿ ಕನ್ನಡಿಗರ ...
ಹೃದಯಂಗಮ ನುಡಿನಮನ ...

**- ಶಾಂತಶೀಲಾ, ಶಿಕ್ಷಕಿ, ಮಡಿಕೇರಿ**





# ಘೋರ ದೃಶ್ಯ

ಗಗನದ ಹಕ್ಕಿ
ಬಾನಲ್ಲಿ ಚುಕ್ಕಿ
ಸಾಗಿತು ಮೋಡವ ಕುಕ್ಕಿ

ಪಯಣವು ಸಾಗಿತು ಇರುಳಲ್ಲಿ
ಮಿಣ ಮಿಣಗುಡುವ ಬೆಳಕಲ್ಲಿ
ಕತ್ತಲೆ ಕಾಣಲಿಲ್ಲ ಅಲ್ಲಿ

ಹಕ್ಕಿಯ ಒಳಗೆ ನರರ ಹಿಂಡು
ಆಕಾಶ ತುಂಬ ತಾರೆಗಳ ದಂಡು
ಹರ್ಷಿಸಿತು ಮನ ಅವುಗಳ ಕಂಡು

ಅರುಣೋದಯದ ಸಮಯ
ತವಕಿಸಿದವು ಸೇರಲು ಮನೆಯ
ತಾರೆಗಳು ಕಣ್ಣಿಂದ ಮಾಯ

ಪಯಣ ಮುಗಿಯಿತು.
ಕೆಳಗೆ ಇಳಿಯಿತು
ಭೂ ಸ್ಪರ್ಶಿಸಿತು

ಹಾರುವ ಹಕ್ಕಿಗೆ
ಓಡುವ ಕಾಲಿಗೆ
ಗಾಳಿ ಸಾಕಾಗಲಿಲ್ಲ ಗಾಲಿಗೆ

ಭಾನು ಭುವಿಯು ಕೇಳುವಂತೆ
ಸಿಡಿಯಿತು ಗಾಲಿ ಬಾಂಬಿನಂತೆ
ಕ್ಷಣದಲ್ಲಿ ಹಕ್ಕಿಯು ಉರಿಯಿತು ಜ್ವಾಲೆಯಂತೆ

ಹಕ್ಕಿಯಲ್ಲಿದ್ದ ಮನಗಳ ಬಣ್ಣ
ಕರಕಲಾಗಿತ್ತು ಕಣ್ಣಾ
ಬಿಡಲಾಗಲಿಲ್ಲ ಕಣ್ಣಾ



# ಕಾರಣ ಇಷ್ಟೇ...

ಕುಡಿಯುತ್ತೇವೆ, ಕುಣಿಯುತ್ತೇವೆ
ತಿನ್ನುತ್ತೇವೆ, ಹಣ ನೀಡಿ ಕರಗಿಸುತ್ತೇವೆ
ವೇದಾಂತ ಪಠಿಸುತ್ತೇವೆ, ರಾದ್ಧಾಂತ ಮಾಡುತ್ತೇವೆ
ಕಲಹ-ವಂಚನೆ ಮಾಡುತ್ತೇವೆ, ಸುಖಾ ಸುಮ್ಮನೆ ಕೊರಗುತ್ತೇವೆ
ಕಾರಣವಿಷ್ಟೇ ... ನಾವು ಸ್ವತಂತ್ರರು !


ಕನಸು ಕಾಣುತ್ತೇವೆ, ಕನವರಿಸುತ್ತೇವೆ
ಸವಿನಿದ್ದೆ ಮಾಡುತ್ತೇವೆ, ಮೈಮರೆಯುತ್ತೇವೆ
ಪ್ರೀತಿಸುತ್ತೇವೆ, ಸ್ವಾರ್ಥ ಪ್ರಾಣರಾಗುತ್ತೇವೆ
ಗಳಿಸುತ್ತೇವೆ. ಕರಗದಷ್ಟು ಉಳಿಸುತ್ತೇವೆ
ಕಾರಣವಿಷ್ಟೇ ... ನಾವು ಸ್ವತಂತ್ರರು !

ಮತ ನೀಡುತ್ತೇವೆ, ರಾಜಕಾರಣ ಮಾಡುತ್ತೇವೆ.
ಮೀಸಲಾತಿಗೆ ಬಡಿದಾಡುತ್ತೇವೆ. ಸ್ವಜನ ಹಿತಕಾಯುತ್ತೇವೆ.
ಸಂಬಳ ಪಡೆಯುತ್ತೇವೆ. ಕಿಸೆಗೆ ಗಿಂಬಳ ಹಾಕುತ್ತೇವೆ.
ವ್ಯಕ್ತಿ ಆರಾಧನೆಗೈಯುತ್ತೇವೆ, ಮರ್ಯಾದಸ್ತ ಮುಖವಾಡ ಹಾಕುತ್ತೇವೆ.
ಕಾರಣವಿಷ್ಟೇ ... ನಾವು ಸ್ವತಂತ್ರರು!

ಕಾರಣವಿಷ್ಟೇ ...
ಅವಳ ಕರಳಿನಕುಡಿ
ಕಮರಿ ಹೋಗಿದೆ ನಮಗಾಗಿ,
ಅವಳ ಮಾಂಗಲ್ಯ ಭಾಗ್ಯ
ಚಿತೆಯಲ್ಲಿ ಬೆಂದು ಹೋಗಿದೆ ನಮಗಾಗಿ
ನಮಗಾಗಿ ..., ನಮ್ಮ ಸ್ವಾತಂತ್ರ್ಯಕ್ಕಾಗಿ!

ಕಾರಣವಿಷ್ಟೇ ...,
ಕೆಚ್ಚೆದೆಯ ವೀರ ಸೇನಾನಿಗಳು
ತಮ್ಮೆಲ್ಲಾ ಕಾಮನೆಗಳನ್ನು ಬಲಿನೀಡಿ,
ನಮ್ಮನ್ನು ಬೆಚ್ಚಿಬೀಳಿಸದೆ ಬೆಚ್ಚಗಿಡಲು
ದೇಶ ಕಾಯುವುದರಿಂದ
ನಾವು ಸರ್ವ ಸ್ವತಂತ್ರರು!

- ಮಂಜು ಗೋಪಿನಾಥ್, ಹೊದ್ದೂರು





# ಬೆಡಗಿನ ಕೊಡಗು

ಎತ್ತರವಾದ ಬೆಟ್ಟಸಾಲು ನೋಡಬನ್ನಿರಿ
ಕೊಡಗಿನ ಬೆಡಗನ್ನು ಸವಿದು ನೋಡಿರಿ
ಸುತ್ತಮುತ್ತ ಹಚ್ಚಹಸಿರ ಗಿರಿಕಂದರ
ಇಲ್ಲಿ ನಡೆದ ನಾಡದಸರ ಬಲುಸುಂದರ

ರಾಜಾಸೀಟ್-ಅಬ್ಬಿಫಾಲ್ಸ್ ಸೊಬಗಿನ ತಾಣ
ಪ್ರವಾಸಿಗರಿಗೆ ನೀಡಲಿದೆ ರಸದೌತಣ
ಮಾಂದಾಲ್‌ಪಟ್ಟಿ-ಕೋಟೆಬೆಟ್ಟ ನೋಡಲೆಬೇಕು
ಹಾರಂಗಿ-ದುಬಾರೆಗೆ ಹೋಗಲೇಬೇಕು

ದೇಶಕಾಯೊ ಯೋಧರಿರುವ ವೀರನಾಡಿದು
ಜಾತಿಮತ ಭೇದಭಾವ ಇಲ್ಲಿಕಾಣದು
ಯಾಲಕ್ಕಿ ಕಾಫಿ ಭತ್ತ ಹುಲುಸಾಗಿದೆ
ನಮ್ಮೂರ ಕಿತ್ತಳೆ ಬಲುರುಚಿಯಾಗಿದೆ.

ಮಳೆಯೆ ಬರಲಿ ಬಿಸಿಲೆ ಇರಲಿ ಅತಿಎನಿಸದು
ಸರ್ವ ಋತು ಹೊಂದುವಂತ ಭವ್ಯ ಕೊಡಗಿದು
ಸದಾ ನಿಮ್ಮ ನೆನಪಲಿರಲಿ ನಂ ನಾಡ ಸಂಸ್ಕೃತಿ
ಸರ್ವರಿಗೂ ಸಿಗಲಿ ನೆಮ್ಮದಿ-ನವಶಾಂತಿ

- ಎಂ.ಇ ಮಹಮದ್, ಮಡಿಕೇರಿ



# ಗುರುವೇ ನಮಃ

ಓ ಎನ್ನ ನಲ್ಮೆಯ ಗುರುವೇ,
ನೀ ಆಗಾಗ ನನ್ನ ಮನದೊಳಗೆ ಬರುವೆ||
ನಾನಾಗ ಗತಕಾಲದ ನೆನಪೊಳಗೆ ಸೇರುವೆ
ಬಸವಳಿದ ತನು-ಮನಕೆ ತಂಪನು ತರುವೆ||

ತುಂಬಿ ತುಳುಕುತಿತ್ತು ಎನಗೆ ಜ್ಞಾನದ ಹಸಿವು
ಅರಿವೆಂಬ ಮೃಷ್ಟಾನ್ನ ನೀಡಿ ತಣಿಸಿದೆಯಾ ದಣಿವು||
ಸರಿ-ತಪ್ಪು ಒಂದೂ ಅರಿಯದಾಗಿದ್ದೆ ನಾನು
ತಿದ್ದಿ ತೀಡಿ ಸರಿಪಡಿಸಿದೆ ನನ್ನ ನೀನು||

ನೀ ನೀಡಿದೆ ನನಗೆ ನ್ಯಾಯ-ನೀತಿಗಳ ಬೋಧನೆ
ನಿನ್ನ ಆದರ್ಶದಡಿಯಲಿ ನಾ ಮಾಡಿದೆ ಸಾಧನೆ||
ಹುಡುಕಾಡಿದೆ ಹಗಲಿರುಳು ಆ ಊರು ಈ ಊರು
ಸಿಗಲಿಲ್ಲ ನನ್ನ ಬಾಳಲಿ ನಿನ್ನಂಥ ಸದ್ಗುರು||

ಮನ್ನಿಸುವೆಯಾ ತಪ್ಪುಗಳ ಓ ಎನ್ನ ಗುರುವೇ
ನಿನ್ನ ಮುಂದಿಟ್ಟು ನಾ ಕೀರ್ತಿಯಾ ತರುವೆ||
ದಿವ್ಯ ಚೇತನವಿಲ್ಲ ನನಗೆ ನಿನ್ನ ವಿನಹ
ಶಿರಬಾಗಿ ವಂದಿಸುವೆ ಗುರುವೇ ನಮಃ

- ಅಶ್ರಫ್ ಯಂ.ಕೆ., ವೀರಾಜಪೇಟೆ



# ಕಾಣೆಯಾಗಿದ್ದಾರೆ

ಟಿ.ವಿ. ಮಾಧ್ಯಮಗಳಲ್ಲಿ
ದಿನಪತ್ರಿಕೆಗಳಲ್ಲಿ ಕಾಣುವುದು
ಇವರು ಕಾಣೆಯಾಗಿದ್ದಾರೆ


ಇಂಗ್ಲೀಷ್ ಮಾತನಾಡಲಿಲ್ಲ!
ಕನ್ನಡ ಓದಲು ಬಲ್ಲ
ತಮಿಳು ತೆರಿಯಾದ್
ಮಲಯಾಳಂ ಗೊತ್ತು ಸ್ವಂತ- ಭಾಷೆಗಳ
ಜೊತೆ ಪಕ್ಕದ ಭಾಷೆಯ ಅರಿವು ಇರುವ ಇವರು
ಕಾಣೆಯಾಗಿದ್ದಾರೆ.

ಐದು ಅಡಿ ಎತ್ತರದ ನಾಲ್ಕು ಅಡಿ ಉದ್ದದ
ಕೆಂಪಂಗಿ ತೊಟ್ಟವ! ತುಂಬುತೋಳಿನ
ಶರ್ಟನ್ನು ಹಾಕಿಕೊಂಡವ! ಕಪ್ಪನೆಯ
ಪ್ಯಾಂಟನ್ನು ಧರಿಸಿದವ!
ನೀಲಂಗಿಯ ನೀಲಾಂಬರಿ
ಕೆಂಪಂಗಿಯ ಕೆಂಪಿಯರು
ಹಸಿರು ಗಾಜಿನ ಬಳೆಗಳ ಸುಂದರಿಯರು
ಆದರೆ ......!
ಇವರು ಕಾಣೆಯಾಗಿದ್ದಾರೆ

ಹೆಚ್ಚುತ್ತಿದೆ ಕ್ರಿಕೆಟ್ ಮ್ಯಾಚ್‌ನ ಸ್ಕೋರ್‌ಗಳಂತೆ
ತಂದೆ-ತಾಯಿಯರ ನೀರವ ವತ್ತಾನ
ಮಡುಗಟ್ಟಿದೆ ಇಲ್ಲಿ ಕಾರಣವೇನು
ತಿಳಿಯಲಾಗಿದೆ ! ಇಂದಿನ ಕುಟುಂಬ
ವ್ಯವಸ್ಥೆಯಲ್ಲಿ ಖಿನ್ನತೆ ಹೆಚ್ಚಿದೆಯೇ

ತಿಳಿಯಲೊಲ್ಲದಂ. ಆದರೂ
ಇವರು ಕಾಣೆಯಾಗಿದ್ದಾರೆ
ಮಕ್ಕಳಿಗೊಸ್ಕರ ಪುರುಸೊತ್ತೇ ಇಲ್ಲದ
ಪಾಲಕರ ನಡುವೆ ಕಳೆದು
ಎಳೆಯ ಜೀವಗಳು! ಹಿಂದಿನ
ಚಿಣ್ಣಿಗೋಲು, ಲಗೋರಿ, ಗೋಲಿಯಾಟಗಳಲ್ಲಿ
ಬದಲಾಗಿ ಬಂದಿದೆ ಕಂಪ್ಯೂಟರೀಕರಣ
ಬೇಕಾಗಿದೆ ಅವರಿಗೆ ಇಂದು ಮುಕ್ತ ಸ್ವಾತಂತ್ರ್ಯ
ಅದಕ್ಕಾಗಿ ಹೊರಟ ಇವರು ಆಗುವರು
ಕಟುಕನ ಕೈಗೆ ಸಿಕ್ಕ ಕುರಿಯಂತೆ
ಆದರೂ ಇವರು ಕಾಣೆಯಾದವರು

**- ಆಶಾ ಧರ್ಮಪಾಲ್ ಪ್ರಭು, ಮಡಿಕೇರಿ**



# ಸಹಿಸಿ ಬಾಳುವುದೆಂದರೆ

ಸಹಿಸಿ ಬಾಳುವುದೆಂದರೆ
ಏನನು ಪ್ರಶ್ನಿಸದೆ
ಅನನೂ ಧಿಕ್ಕರಿಸದೆ
ಒಪ್ಪಿಗೆಯಿಲ್ಲದ ಅಪ್ಪುಗೆಯಂತೆ
ನೀರಸ, ನೀರವ ಮೌನವ ಬಾಳ್ವೆ.
ಅಥವಾ
ಒಡಲೊಳಗೆ ಧಗಧಗಿಸುವ ಅಗ್ನಿ
ಮೇಲೆ ಅಚ್ಚಹಸಿರು
ವಿಧವಿಧದ ಚಿತ್ತಾರದ ಧರಣಿಯಂತೆ
ನಿರ್ಲಿಪ್ತವಾಗಿ; ಅರ್ಥಪೂರ್ಣವಾಗಿರುವುದು.
ಅಥವಾ
ಮಾನವ-ಮಾನವ ಬಂಧನಗಳಿಂದ
ಮಾನವ-ನಿಸರ್ಗದ ಸಂಬಂಧದೆಡೆಗೆ
ಹರಿಯಬಿಟ್ಟ, ಚಿಂತನೆಗಳಲ್ಲಿ
ನೆಲ- ಜಲದ, ಬೆಳಕು ಬಣ್ಣಗಳ ಸ್ನೇಹವನು
ಸಾಪೇಕ್ಷ ಸಂರಚನೆಗಳನು
ಬೆರಗುಗಣ್ಣುಗಳಲಿ ಶೋಧಿಸುವುದು.
ಅಥವಾ
ಎಲ್ಲವನರ್ಥೈಸಿಕೊಳ್ಳುತ್ತಾ
ಅನುಭವಿಸುತ್ತಾ,
ಶಬ್ದಾರ್ಥಗಳ ಮೀರಿ
ಹೊಸ ಕಾಣ್ಕೆಯಲಿ,
ಸುಖ-ಅಸುಖಗಳ ಮಿತಿಯಾಚೆ
ಸೋಜಿಗದಲಿ ನಿಲುವುದು.

**- ಹೆಚ್. ಆರ್. ಶೇಖರ, ಸೋಮವಾರಪೇಟೆ**



# ಪ್ರೇಮ ಕವನ

ನಾನು ಮೂಲೆ ಬಿಳಿಯ ಹಾಳೆ
ಎತ್ತಿಕೊಂಡೆ ಕೈಯಲಿ
ಪೆನ್ನು ಹಿಡಿದು ಯೋಚಿಸಿ
ಬರೆದೆ ಕವನ ಮೌನದಿ.

ಪ್ರೀತಿಯಿಂದ ಬೆಸೆದ ಹೃದಯ
ತಾಳ ತಪ್ಪಿ ನಲಿಯಲು
ತೆರೆದ ಮನಸು ನೆನಪಿನಲ್ಲಿ
ಹಾಡಿನಿಂದ ಉಲಿಯಲು.

ಹಗಲು ಇರುಳು ಸ್ವಪ್ನವು
ಕಾಣುತಿಹುದು ನಯನವು
ಚಿತ್ರ ನೋಡಿ ಮನಸು ಅರಳಿ
ಅಗಲವಾಯ್ತು ವದನವು.

ಹೃದಯದಲ್ಲಿ ವೀಣೆ ಮೀಟಿ
ಬಾರದಾಯ್ತು ನಿದ್ರೆಯು
ನೆನಪಿನಲ್ಲೆ ಮಿಂದು ಎದ್ದು
ಸರಿಯುತ್ತಿತ್ತು ಘಳಿಗೆಯು

ಪದಕೆ ಪದವ ಕೂಡುತ
ಸೃಷ್ಠಿ ಆಯ್ತು ಕವನವು
ಕದವ ತೆರೆದ ಪ್ರೀತಿಗೆ
ಇದುವೆ ಪ್ರೇಮ ಗೀತೆಯು.

**- ಕು. ಚೈತನ್ಯ ಎಸ್.ಪಿ., ಮಡಿಕೇರಿ**



# ರೈತ

ಮುಂಜಾನೆ ಬೆಳಕಿನಲಿ
ಅರೆನಿದ್ರೆ ಅಮಲಿನಲಿ
ಕಾಯಕದ ಛಲದಲ್ಲಿ
ಎದ್ದಾನೋ ರೈತ ಎದ್ದಾನೋ

ಬರಿಖಾಲಿ ಉದರದಲಿ
ಬೆಳೆಬೆಳೆಯುವ ಹಠದಲ್ಲಿ
ಸಲಕರಣೆಯ ಹಿಡಿಯುತಲಿ
ಹೊರಟಾನೋ ರೈತ ಹೊರಟಾನೋ

ಬೆಳೆ ಬೆಳೆಗಳ ನಡುವಿನಲಿ
ಉತ್ಸಾಹದ ಹುಮ್ಮನಸಲಿ
ರೈತಾವಳಿ ಕನಸಿನಲಿ
ಗುನುಗ್ಯಾನೋ ರೈತ ಗುನುಗ್ಯಾನೋ

ಕಣಜ ತುಂಬುವ ಇಚ್ಛೆಯಲಿ
ತಂಗಾಳಿಯ ಕುಳಿರಿನಲಿ
ಕರ್ಮಕಾಂಡದ ಕಾರ್ಯದಲಿ
ಬೆಳೆದಾನೋ ರೈತ ಬೆಳೆದಾನೋ

ಬೆನ್ನೆಲುಬಿನ ಪ್ರಜೆಯಾಗಿ
ದೇಶ ರಕ್ಷಣೆಯ ಸಹಯೋಗಿ
ಪ್ರಜೆಗಳ ಪಾಲಕನಾಗಿ
ಸವೆದಾನೋ ರೈತ ಸವೆದಾನೋ

ಜೀವನದಲ್ಲಿನ ಪ್ರಾಮಾಣಿಕತೆಯ
ನಿತ್ಯ ನಿರಂತರ ಉಪಕಾರದ
ಯೋಗಾಭ್ಯಾಸದ ಸಹಯೋಗಿಯ
ಮರೆಯೆನು ನಿನ್ನ ಸಹವಾಸವ

ಜೀವಕೆ ಜೀವ ಅಡವಿಡುವವನೆ
ಸತ್ಯಕ್ಕೆ ಸದಾ ನಾಮಾಂಕಿತನೆ
ಶ್ರಮದಲಿ ಜೀವವ ಸವೆದವನೆ
ಮರೆಯೆನು ನಿನ್ನ ಒಡನಾಟವ

ಸ್ವಾಭಿಮಾನದಿ ಕಲೆತವನೆ
ಸ್ವಂತದ ಆಸೆಯ ಮರೆತವನೆ
ಪರೋಪಕಾರದಿ ನುರಿತವನೆ
ಪರರ ನೋವ ಸಹಿಸದವನೆ

ತ್ಯಾಗದಿ ಜೀವನ ಕಳೆದವನೆ
ಪ್ರಾಣಿ ಹಿಂಸೆಯ ಸಹಿಸದವನೆ
ಪ್ರಾಣಿಯ ಜೀವ ಪೋಷಿಸುವವನೆ
ಮರೆಯೆನು ನಿನ್ನ ಪರೋಪಕಾರವ

- ಅನನ್ಯ ಶರ್ಮ, ಗೋಣಿಕೊಪ್ಪಲು



# ಪ್ರೀತಿ ಮೂಡುವ ಹೊತ್ತು

ನನ್ನ ಹೃದಯ ಬರಿದಾಗಿದ್ದಾಗ ಭಾರವಾಗಿತ್ತು
ಈಗ ನೀ ತುಂಬಿಕೊಂಡೆ ಹಗುರಾಯ್ತು ....
ನೀ ಕಣ್ಣಿಗೆ ಕಾಣದಾಗ ಹಾತೊರೆಯುತ್ತಿತ್ತು
ಆಗಾಗ ಸಾಯಬೇಕೆನಿಸುತ್ತಿತ್ತು.
ಆದರೆ, ಮನಸ್ಸು ನಿಲ್ಲೇ ಗೆಳತಿ ಕಾಯೇ ನೀನು ಎನ್ನುತ್ತಿತ್ತು.
ಏನು ಮಾಯೆ ಮಾಡಿದೆಯೋ ನೀನು
ನಿನ್ನ ಮೊದಲ ಮಾತಿಗೆ ಕರಗಿ ಹೋದೆನೋ ನಾನು ...
ನೀನು ನನ್ನನ್ನು ಹೇಗೆ ಮೆಚ್ಚಿದೆಯೋ ತಿಳಿಯದು
ಆದರೆ ನಿನ್ನ ಹೃದಯದ ಗೂಡಿನಲ್ಲಿ ನನಗೊಂದು
ಪುಟ್ಟ ಸ್ಥಾನವಿದೆ ಎಂಬುದು ತೃಪ್ತಿಯಿಂದು ...
ಮನಸ್ಸು ಹುಚ್ಚೆದ್ದ ಕುದುರೆಯಂತೆ ಗೀಳು
ಹಿಡಿದು ಎಳೆವವರು ಯಾರು ಇಲ್ಲದಂತಾಯ್ತು
ಆಕಾಶವನ್ನೊಮ್ಮೆ ಮುತ್ತಿಕ್ಕಿ ಬರಬೇಕಿನಿಸಿತು ...
ನೀ ಬಾರದ ದಿನ ವಿಹ್ವಲವಾಗಿತ್ತು
ನೀರಿಲ್ಲದ ಮೀನಿನಂತೆ ಒದ್ದಾಡುತ್ತಿತ್ತು
ಆದರೆ, ನೀನಾಗಲೇ ಮುಂಗಾರು ಹನಿಯಂತೆ
ಭೂಮಿಗಿಳಿದು ತಂಪು ನೀಡಿದಂತೆ
ಆಣೆ ಮಾಡಿ ಹೇಳುವೆ ಗೆಳೆಯ
ನನ್ನ ಹೃದಯ ಬರಿದಾಗಿದ್ದಾಗ ಭಾರವಾಗಿತ್ತು
ಈಗ ನೀ ತುಂಬಿಕೊಂಡೆ ಹಗುರಾಯ್ತು

**- ಅಕ್ಷತಾ ದಯಾನಂದ ಶೆಟ್ಟಿ, ಮಡಿಕೇರಿ**



# ಸಂಗಾತಿ

ಜೀವನದ ಗೆಳೆಯ
ನಾನೊಂದು ಲೋಕ
ನೀನೊಂದು ಲೋಕ
ನಡುವೆ ಜೀವನದ ಭೋರ್ಗರೆತ
ಈಜಲಾರದ ಕಡಲಂತೆ.

ಕತ್ತಲಾಗುವ ಹೊತ್ತು
ಹೊತ್ತು ತಂದಿದೆ
ನೆನಪುಗಳ ಆಪತ್ತು
ಕಳೆದ ದಿನಗಳ ಹಾದಿಯಲಿ
ಪ್ರತಿದಿನ ಸವಿಸ್ಮರಣೆಗಳ ಬೇಗೆಯಲಿ

ದೂರ ಬಹುದೂರ
ನಡೆದು ಸೇರಲಾರದಷ್ಟು ದೂರ
ಏಕೀ ಅಂತರ ನಮ್ಮೊಳಗೆ
ಬರೆಯಲಾರೆಯ ನನ್ನೀ ಮನದೊಳಗೆ
ಕಾದಿರುವೆ ಹಗಲು ರಾತ್ರಿಯೊಳಗೆ.

ಬಾನಿನಂತೆ ನಿನ್ನ ಗೋಚರ
ನಕ್ಷತ್ರದಂತೆ ಸಂಧಿಸುವ ಕಾತರ
ನನ್ನ ಕಷ್ಟಸುಖಗಳನ್ನಾಲಿಸಿ
ನೀ ಮನನೊಂದು ವಿಚಲಿತನಾದೆ
ನನ್ನಿಂದ ಕಣ್ಮರೆಯಾದೆ.

**- ಕುದಿಯನೆರವನ ರೇವತಿ ರಮೇಶ, ಮಡಿಕೇರಿ**



ಕೊಡವ ಭಾಷೆ

## ಕೊಡಗ್ ಬೋಜ

ನೀಲಕೊಡಿ ನೀರ್ ನೋಟ್ ನೀಲರಂಗ್ ಬಾಣ ನೋಟ್
ನೀಲಾಂಬರತ್ ಪಾರಿಕಳಿಪ ಪಕ್ಷಿ ನೋಟಿರೊ
ಜಾತಿನಲ್ಲ ಪೂವ್‌ನೋಟ್ ಜೂಂಗಿತಾಡ್ವ ಪಣ್ಣ್ ನೋಟ್
ರಂಗ್ ಮೇಕಿತೆಲಂಗ್‌ವ ಬೋಜ ನೋಟಿರೊ

ಸುತ್ತೊ ಪಚ್ಚೆ ಕೋಟೆ ನೋಟ್ ಕಾಜಾಟಿ ಕಡ್‌ಪ ಕಡವು ನೋಟ್
ಕುಂದ್ ಮೋಳ್‌ಲೆಲಂಗುವ ಪೂವ್ ನೋಟಿರೊ

ಚೆಪ್ಪ್‌ಪಾನಿ ಮಂಡೆತುಣಿ ಭೀರ್ಯ ಪರ್‌ಂದ ಕೊಡಗ್ ಮಣಿ
ಪಾಡಿ ಆಡಿ ಬೋಜತೆಲಂಗ್‌ವ ಕ್ರೋಢ ಕನ್ನಿಯಳೋ
ಒಟ್ಟೊತ್ತ ನೆಲವೊ ನೋಟಿ ತಟ್ಟೊತ್ತ ಸಭೆಯೊ ನೋಟಿ
ಒತ್ತೋರ್ಮೆ ಕೊಂಡಿತ್ ಎಲ್ಲಾ ಕೂಡಿರೋ

ಭಾರತಾಂಬೆ ಮಾತಾಯಿ ಕನ್ನಡಾಂಬೆ ಪೊರ್‌ತವ್ವ
ಊಜುಮಾಲೆ ಕೊಡವು ಏಡ ಪ ಎತ್ತವ್ವನೊ ||ನೀಲ ಕೊಡಿ||

**- ಮುಲ್ಲೇಂಗಡ ರೇವತಿ ಪೂವಯ್ಯ, ವೀರಾಜಪೇಟೆ**

# ಕೊಡಗ್‌ರ ಕಾಡ್



ಪಚ್ಚೆ ರಂಗ್‌ರ ಚಿಂಗಾರ ಪೊತ್ತ್ಂಡ್ |
ಕೊಡಗ್‌ರ ಕಾಡ್ ಕುಂದ್ ಮಂದ್‌ಲ್ |
ಚಕ್ಕೆ ಮಾಂಗೆ ಮುಂಡ್ರತ ತೊಳಿಯಾರ್ |
ಇಂಜತ್ ಮರಬಳ್ಳಿ ಇಲ್ಲಿ ನೂರಾರ್ ||

ನೇರ ಕುಂಗೆ ಕರ್ಮಂಜಿ ಎಳಂದೆ |
ಚೋದ್‌ರ ಪಣ್ಣ್‌ರ ಪತ್ತಾಯ ಅಂದ್ |
ಗೀಜೆ ಗಿಣಿ ಆನೆ ನರಿ |
ತರಾವರಿ ಚಾಯಿರ ಪ್ರಾಣಿ ಪಕ್ಷಿರ ಪರಿ ||

ಅಯ್ಯಪ್ಪ ಭದ್ರಕಾಳಿ ಇಗ್ಗುತ್ತಪ್ಪ ದೇವಕಾಡ್ |
ದೇವ ದೇವಿರ ವಾಸ ಕುಂದ್‌ಕೋವ್‌ಲ್|
ಪೂಜೆ ಪುರಸ್ಕಾರ ಪ್ರಕೃತಿ ದೇವಕ್ |
ಪಂಡೇತ ನಡ್‌ಪು ಜೀವಕೋಟಿ ರಕ್ಷಣೆಕ್ ||

ಚಳ್ಳಪುಳ್ಳಿ ಕಾಲ್ ಕಂಬ್‌ಕ್ |
ಕಾಡ್ ನಾಶ ತೋಟ ರೆಸಾರ್ಟ್‌ಕ್ |
ಚಾಂದ್ ಬೂಟಿನ ಮಾಡ್‌ಚಿ ಲೂಟಿ |
ಮಂಡೆ ನೇತ್‌ಚಿ ಕಾಡ್‌ಲ್ ಇಂಜಿ ನಾಟಿ ||

ಭೂಮಿರ ಕಾತ್ ಆಚಿ ಏರ |
ತೊಟ್ಪ್ ನೀರ್‌ಕ್ ಶುರುವಾಕು ಪೋರ್ |
ಪ್ರಾಣಿ ಪಕ್ಷಿಯ ಪಾರ್‌ಚಿ ದೂರ |
ನಂಗ ಮಾಡಂಡು ಬಾರಿ ಬ್ಯಾರ ||

ನುಗ್ಗ್‌ಚಿ ನಾಡ್‌ಕ್ ಕಾಡ್‌ರ ಆನೆ |
ಕಾಡ್‌ಚಿ ನಂಗಳ ಚಿಕೂನ್‌ಗೂನ್ಯ ಪಂದಿಪನಿ |
ಬೋಜತ್‌ರ ಕಾಡ್‌ನ ಮಾಡತೆ ಪಾಳ್ |
ದುಂಬ್‌ನ ಕಾಡೇ ನಂಗಡ ಕೂಳ್ ಬಾಳ್ ||

**- ಕೊಂಗಿರಂಡ ದಮಯಂತಿ ಕುಶಾಲಪ್ಪ, ಮಡಿಕೇರಿ**

# ನೊಂಬಲ-ಮನತ್ ದುಂಬ್‌ನ ನೊಂಬಲ

ಮನತ್ ದುಂಬ್‌ನ ನೊಂಬಲತ್‌ನ ಎನ್ನನೆ ನಾ ಸಹಿಸಡ್,
ಏಡ ಮನ, ಏಡ ತಡಿ ನೊಂಬಲತ್ ಚೋತಿತ್
ಗಾಯಕಾಪ ನೊಂಬಲಕ್ ಪಲತರತ್ ಮದ್ದ್‌ನ
ಗಾಯಕ್‌ಟ್ಟ್, ತ್‌ೞಟಿ-ಉದ್ದಿ ನೊಂಬಲತ್‌ನ ಕಳೆಯಲು
ಮನಸ್ಸ್‌ಕಾಪ ನೊಂಬಲಕ್ ಮದ್ದ್ ಮಾಡ್ವಕ್ ಕೈಯುಲೆ
ಕಂದ್-ಕರ್, ಸಾಲ್-ಚಾಚೆ, ನೊಂಬಲತ್‌ನ ಅರಿಯುಲೆ
ಆಹಾ.... ನೊಂಬಲ, ಮನತ್ ದುಂಬ್‌ನ ನೊಂಬಲ

ಬಯತ್ ಚೆರ್‌ಂಜನೆ ಇಪ್ಪಕ, ನೊಂಬಲೊಂದು ಅರಿಯಲಾ
ವರಿತ್ ಎದ್ದ ನೇರತ್, ಎಲ್ಲಾ ಮರ್‌ಂದ್ ಪೋಪಲಾ
ತಡಿಲ್ ಚೋರೆ ದುಂಬಿತಿಪ್ಪಕ, ಮನಕ್ ಒಂದೂ ನಾಟುಲೆ
ಕಲ್ಲ್-ಮುಳ್ಳ್ ತಿಂದ್ ಬದ್‌ಕ್ಕ ಬಯತ್‌ಲ್, ನೊಂಬಲೊಂದು ಅರಿಯುಲೆ
ಮಂಗಲಾಯಿ, ಮಕ್ಕಮರಿ ಆಪಕ್ಕೊಂದು ಗೊತ್ತಾಪುಲೆ
ಬದ್‌ಕಿ ಬಾವಳ ಗೇನ ಒಂದೇ, ತಡಿಲ್ ದುಂಬಿತ್ ಇಪ್ಪಕ
ಪಣಕಾಸ್, ಬೋಗಭಾಗ್ಯ ಕೊರು ಆಯಿತ್ ಉಂಡೆಂಗ್ಯೊ
ಚೋರೆ ದುಂಬಿನಿಂದ ತಡಿಕ್ ಒಂದೂ ಗೊತ್ತೇ ಆಪ್‌ಲೆ || ಆಹಾ...||

ಬೊಳ್‌ಂದ್ ನಿಂದ ಮಕ್ಕ ಮರಿಯ, ಕಣ್ಣ್ ಮಿಂಞಲ್ ಇಪ್ಪಕ
ಚಾಕಿ ಪೊಲತ್ತ್‌ವ ಗ್ಯಾನ ಒಂದೇ ಲೆಕ್ಕ ಇಟ್ಟೆಂಡ್ ಇಪಕ
ಪರ್‌ಂದ ತಕ್ಕ್ ಕೆಜ್ಜ ಚಾಲ್ ತಡಿಕ್ ನಾಟತೆ ಇಪ್ಪಕ
ಬದ್‌ಕ್ಕ ಕಾಯಿತೆ ಪೋಲು ಬೈಟು ಬೇರ್ ಚಿಟ್ಟೆಂಡ್ ಇಪ್ಪಕ
ದಂಡ್ ನೇರ ಕೂಳ್‌ಕೂ, ಮೇಲ್ ಮುಚ್ಚುವ ಬಟ್ಟೆಕೂ
ಪೋರಾಟ ಮಾಡ್ವ ದಿನತ್, ಮನಕ್ ಒಂದೂ ಅರಿಯುಲೆ||

ಮಂಡೆನೆರತಿತ್, ನಡು ಬಗ್ಗಿತ್ ಕೆಯ್ಯ್ಕಯತೆ ಆಪಕ
ಪರ್ಂದ ತಕ್ಕ್, ಕೆಜ್ಜ ಕೇತರೆ, ಅಂಬ್ ಪೋಲೆ ನಾಟುವಾ|
ಕೂಳ್-ನೀರ್ ಒಂದೂ ಬೋಂಡದೆಣ್ವ, ಗೇನ ಬಪ್ಪಲಾ
ಮಕ್ಕ-ಮರಿ ಎಲ್ಲರುಕ್ಕೂ ಮಂಡೆ ನೊಂಬಲ ಆಪಲಾ
ಅಕ್ಕ ಆಪ ನೊಂಬಲ, ದಾರೂ ಕಾಂಗತೆ ಇಪ್ಪಲಾ
ಮನತ್‌ರೊಳ್‌ಲೆ ಬೆಂಜಿ-ಬೆಂಜಿ ಚೋರೆ ಕಮ್ಮಿ ಆಪಲಾ
ನಡ್‌ಪಕ್ಕೆಯಾ, ನಿಪ್ಪಕ್ಕೆಯಾ, ಪರೆವಕ್ಕೆಯತಾಪಕ್ಕ
ಭೂಮಿಕ್ ಭಾರ, ಕೂಳ್‌ರ ನಾಶ, ನೊಂಬಲತ್ತ್‌ರ ಬದ್‌ಕ್‌ಲಾ

ದಾಡ ಕೂಡ ಎಣ್ಣ್ಣಚೇಂಗ್ಯೂ, ಮದ್ದ್ ಇದ್‌ಂಗ್ ಕ್‌ಟ್ಟುಲೆ
ನೊಂದ್-ನೊಂದ್ ಬದ್‌ಕ್ ಕೈಪ, ಬಟ್ಟೆ ಪೊಂದೇ ಮದ್ದ್‌ಲಾ
ಇಂತ ಬದ್‌ಕ್ ಬಾವಂಗುಂಜಿ ಅಂತ್ಯ ಬೆರಿಯ ಕ್‌ಟ್ಟ ಕಾಯಿತ್
ಕಾವೇರಮ್ಮ ನೀಡ ಪಾದಕ್ ಬೆರಿಯಾ ಕಾಕಿಯಂದೆಣ್ಣಿತ್
ಪೋಲು- ಬೈಟು ಎಕ್ಕಲೂ ನೊಂದ ಮನತ್‌ಲ್ ಬೋಡ್ಯವಿ
ನಿನ್ನ...... ಮನ ದುಂಬಿತ್ ಬೋಡ್ಯವಿ||

**- ಶ್ರೀಮತಿ ಕಸ್ತೂರಿ ಗೋವಿಂದಮ್ಮಯ್ಯ, ಮಡಿಕೇರಿ**





# ಕಲ್ಪನೆರ ಲೋಕತ್

ಕಲ್ಪನೆರ ಲೋಕತಿಂದ್
ಗಾನ ಮೇಳ ನಡ್‌ಂದಂಡುಂಡ್
ಆಯಿರಾಯಿರ ಕವಿತೆರ ಸಾಲ್
ಇಲ್ಲಿ ಕೂಡಿಯಾಡುವದುಂಡ್
ಬೆಂದುವಾಯಿತ್ ಬಾ ಭಾವನೆ ಸಮಾರಂಭಕ್

ನೀ ಬಪ್ಪ ಬಟ್ಟೆಲ್ ತೋರಣವಾಯಿತ್
ವೇದಿಕೆರ ಮೊಟ್ಟ್‌ಲ್ ಬೊಳ್‌ಚವಾಯಿತೆಲಂಗಿತ್
ನಾಡ ಕೊದಿರ ಪೂಮಾಲೆ
ನೀಡ ಬೋಳೆಕ್‌ಟ್ಟಿತ್
ತಕ್ಕಾರ ಮಾಡುವೀ ನಾ ಎದೆದುಂಬಿತ್ |

ಪುರ್‌ಡ್ ತಂದ ಆ ಚೆಣ್ಣೂರ
ಈ ಕಾರ್ಯಕ್ರಮಕ್ ಕೊರವುಕಾರ
ನಾನ್ ನೀನ್ ಕೊಡ್‌ವಕ್
ಪುದ್‌ಕಗೊಂಡ್ ಪಾಡುವೊಕ್
ಅವನೆ ಇಂದ್ ಸೂತ್ರಧಾರ |

ರಾಗ-ತಾಳ ಒತ್ತಿತ್
ಪಾಟ್ ಶ್ರುತಿ ಕೂಡಿತ್
ನಾಳೆರ ರಸಗಳಿಗೆಕಾಯಿತ್
ಪಾಡನ ಇಂದ್ ಒಂದಾಯಿತ್
ಅಂದ್ ಕಯಿಚ ನಾಳ್‌ನ.


- ಶ್ರೀಮತಿ ಪಾಲೆರ ರಾಣಿ ಅಪ್ಪಣ್ಣ, ಬಲ್ಲಮಾವಟಿ



# ಐನ್‌ಮನೆ

ನಾಡ್‌ರ ಆ ಜನ, ಆ ನಾಡ್ ಬದ್‌ಕ್‌ರ
ಉಳ್‌ಂಜ ಪಾದಿಮನೆರ ಗೋಡೆಲ್
ಅಂದ್ ನಾ ಮಸಿಲ್ ಬುಡ್‌ತ್‌ನ ಚಿತ್ರ
ಜಿಡ್ಡ್ ಪುಡ್ಚ ಗೋಡೆಲ್ ಅಂದ್
ನಾ ಮಂಡೆಕ್‌ಟ್ಟ ಎಣ್ಣೆ
ನಡ್‌ಂದ್ ತೇಂಜ ಬಟ್ಟೆ
ನಡುರ ಕೊಡಿಕ್ ಬೊಳ್‌ಂದ ಕಳೆ
ಖಾಲಿಯಾನ ಕೊಟ್ಟ್, ಎಲ್ಲಾ ನನ್ನ
ಕಾಕಿ ತೆಳಿಪಯಿಂಜತ್
ಅಜ್ಜಂಡ ತಡಿಕೆದಪುಡಿಪದು
ಮನೆರ ಪಡಿ ಕ್‌ಡ್‌ಕೆಯೂ
ನರ ನರಾಂದ್ ಸದ್ದ್ ಮಾಡಿತ್
ಕೆದಪುಡಿಪ್ಪಕ್ ತಯಾರಾಯಿತಿಂಜತ್
ತಾಮನೆಕ್ ಪೋನ ನಾಕ್
ನೆಲಸಮ ಆನ ಮನೆರ ಮಣ್ಣ್
ಅಂದ್ ನಾ ಬುದ್ದಂಡ್ ಲೆಕ್ಕ ಮಾಡ್‌ನ
ಬುಟ್ಟ ಬಾರಿನ ಮನೆ ಎಡ್‌ತಂಡಂಪ್ಪೋ
ಲೆಕ್ಕ ಮಾಡುವಾನ ಕಂಡ್ ಕಣ್ಣೀರ್‌ಟ್ಟ್
ಕಲ್ಲಾಯಿ ನಿಂದ ನನ್ನ ಎಲ್ಲಾ
ನೋಟಿ ತೆಳಿಪಯಿಂಜತ್.

- ಕಾಳಿಮಾಡ ಮುಮತಜಿನ, ಹಾರಂಗಿ



# ವೀರ ಯೋಧರೆ

ಭರತ ಭೂಮಿಕ್ ಬದ್'ಕ್ ಬೆಚ್ಚ
ಭಾರತಾಂಬೆರ ವೀರ ಯೋಧರೆ
ಬಗ್ಗ್'ಚಿಡತಿ ನಿಂಗ ಮಂಡೆ
ತಗ್ಗ್'ಚಿಡತಿ ನಿಂಗ ಎದೆ
ಬಾಂಗಿ ತೊತ್ತವಿ ನಿಂಗಕ್ ನಾನ್.

ಕೊದಿಪ ಚೋರೆನ ನೀರ್ ಮಾಡಿತ್
ಮುಡ್'ಪು ಬೆಚ್ಚಿರ ಈ ದೇಶಕ್
ಚದಿಲ್ ಕೆಣಿಪ ಉರ್ತಮಾರಿಯಳ
ಛಲತ್ ಉರ್'ಚಿ ಕೊಂದಿರ
ಬಾಂಗಿ ತೊತ್ತವಿ ನಿಂಗಕ್ ನಾನ್

ಅಪ್ಪ ಅವ್ವನ ಬುಟ್ಟ್' ಪೊರಟಿರ
ಮಣ್ಣ್' ಮನೆನೂ ತಿರ್ಚಿಬೆಚ್ಚಿರ
ಪೊಣ್ಣ್' ಮಕ್ಕಳೊ ದೂರ ಮಾಡಿರ
ಪೊರ್ತ ಮಾತೆರ ರಕ್ಷಣೆಕ್
ಬಾಂಗಿ ತೊತ್ತವಿ ನಿಂಗಕ್ ನಾನ್

ನಿಂಗಡ ಜೀವನ ಒತ್ತೆಬೆಚ್ಚಿರ
ಉಟ್ಟಿ ಮಂಡೆ ನೇತಿ ನಡಂದಿರ
ಶತ್ರು ಬೊಡಿಕ್ ಎದೆನ ಕೊಡ್ತಿರ
ನಿಂದ ಮಾತೆರ ಉದ್ಧಾರಕ್
ಬಾಂಗಿ ತೊತ್ತವಿ ನಿಂಗಕ್ ನಾನ್.

ದೇಶಗಡಿಲ್ ಕಾತ್ ನಿಂದಿರ
ಶತ್ರು ಪಡೆನ ನೆಟ್ಟ್'ಚಿಟ್ಟಿರ
ದೇಶ ಮಾತೆನ ಕೊದ್'ಚಿ ಬದ್ದಿರ
ದೇಶ ವಾಸಿಯಳ ಬದ್'ಕ್'ಚಿಟ್ಟಿರ
ಬಾಂಗಿ ತೊತ್ತವಿ ನಿಂಗಕ್ ನಾನ್.

**- ಚಾಮೇರ ದಿನೇಶ್, ಸೋಮವಾರಪೇಟೆ**

# ಕುಂದ್ ದೇವಿಡ ಮಂದ್‌ಲಿಂದ್



ದಸರೋತ್ಸವ, ದಸರೋತ್ಸವೋ, ಕನ್ನಾರ್
ಅಶ್ವಯುಜ ತಿಂಗತ, ಬೊಳ್‌ತ ಬಾವುಡ ಎದ್‌ಪುಲ್
ದಶಮಿಯಂದ್ 'ಪಂಜೆ'ರ 'ದೇವಿ ಸನ್ನಿಧಿ' ಮಡಿಕೇರಿಲೋ
ದಶಾವತಾರ ಎಡ್‌ತ ಮಾವಿಷ್ಣು-ಲಕ್ಷ್ಮಿನೋ ಕೂಟಿ
ಕಾಶಿ, ಕೈಲಾಸ ಕಡ್‌ಂದಿತ್-ಶಿವಪಾರ್ವತಿಯಾಯಿ
ದಶ ದಿಕ್ಕ್-ದಿಕ್ಪಾಲಕಂಗಳಾಯಿ, ಬಪ್ಪುದುಂಡದಾ...

ಕುಂದ್ ದೇವಿಡ ಮಂದ್‌ಲಿಂದ್
ಮೂಂದ್ ರಂಗ್‌ರ ಪೊಡಿಯ ಪೊಂಗುರಿಯಿಟ್ಟ್
ಮೂಂದ್ ಲೋಕಕ್ಕೂ 'ಧರ್ಮದೇವತೆಯಾನ ಭಾರತಾಂಬೆಯೋ'
ಧೀಂ ಧಿಮಿತ, ಝುಂ-ಝುಣುತಾಂದ್ ಬಪ್ಪದುಂಡದೋ
ಅಂದಿ ಆಪದು, ಮೈಸೂರ್ ಚಾಮುಂಡೇಶ್ವರಿ
ಅಂದೋಡೆ ಬಪ್ಪದುಂಡ್, ನೀನೂ ಬಾಮೂಡಿ ಮಾಚಿ
ರಜಿಯ, ರಮ್ಯ, ರೋಜಿ...
ಕೊಡ್‌ಮಲೆ ಗೀಚೆಯಡ ಕೊರಕ್ ಸ್ವರಕೂಟಿ
ಪಾಡಿಯಂಡ್, ಬಯ್ಯ ನೆರಿ ಬೀಜಿಯಂಡ್ ಮರ-
ನಾಡ್-ಇದೋ... ಶೂರ ಕೊಡವಡ ತಾಮನೆಯೂ-ಕಡ್‌ಂದ್
ಓಡಿಯಂಡ್ ದಾಟುವಳ ಮೋಡತರಡಿಯ
ಮಡಿಕೇರಿ ನವರಾತ್ರಿ ಮಂಟಪ ನೋಟ್ಟಳ ಪೊರಟಲ್ಲಿ-ಕಂಡ ನಾ

ಕುಂಡಿಗೆ, ಬ್ರಹ್ಮ ಕುಂಡಿಗೆ ನೊಮ್ಮ ಕಂಡ್-ತುದ್‌ಚಂಡ್
ತಂಡ್ ಕುತ್ಯಂಡ್, ಬಂಡ್ ಚವುಟಿಯಂಡ್
ತಂಡ್ ಕೇಂಬು, ತೋಡೇರಿ ಬೇಕೋವು
ಕೊಂಡಂಗೇರಿ ಕಾ ಬಟ್ಟೆ, ನಂಗಡಾದಿಕವಿ ಅಪ್ಪಚ್ಚನೋ....
ತೊಂಡನಾಚೆಂಗೆನ್ನ ಪಾಟ್ ಪಾಡಿಯಂಡ್
ಕುಂದ್ ಪೊಳಬರಿ ಮಡಿಕೇರಿ ಪೇಟೆ ಬಟ್ಟೆನ ತೇಡಿ, ನಡ್‌ಂದತ್.

ಕುಂದ್ ದೇವಿ ಕಾವೇರಿ ಪರಿವಳಾ ಪೊಳೆಕರೆಕಾಲೆ
ಪೊಂದೇನ್ ಪ್ರಾಣಿ-ಪಕ್ಷಿಯಡ ಗಾಂಧಾರರಾಗ
ಬಂದ್ ಎತ್ತ್‌ಚಿ, ನಿಂದ್ ನೋಟಿಚಿ ಅಪ್ಪಚ್ಚಜ್ಜ
ಕಂಡಿಲ್ಲಿ-ಕೊಡವ, ಕನ್ನಡ, ತುಳು, ಉರ್ದು,
ಕೊಂಕಣಿ, ಇಂಗ್ಲಿಷ್ ಕವಿಕೂಟತ್ತ್‌ನೋ
ತಂಡ್ ಬೀಜಿಯಂಡ್ ಮೀಸೆ ತಿರಿಕಿಯಂಡ್
ದಂಡ್ ಚಳ್ಳೆ-ಬೊಳ್ಳೆ-ಕಳ್ಳ್, ತಾತ್‌ಚೋ.... ಇದ್‌ನ

ಕಂಡ ಕಾರ್ಯಪ್ಪಜ್ಜನೂ, ಕೂಟ್ ಕೂಡಿಯಂಡ್ ತಿಮ್ಮಯ್ಯಜ್ಜನೂ
ತಂಡ್ ಬೆಚ್ಚಿ ಕುಪ್ಯಚ್ಯಾಲೆ ಇಟ್ಟಂಡ್, ಕತ್ತಿತೋಕ್ ಪುಡ್‌ಚಂಡ್
ಪಂಡೆತಾಟ್ ಆಡಿಯಂಡ್, ಯಕ್ಷಗಾನ ನೋಟ್ಯಂಡ್, ಉರ್ದು
ಬೆಂದುವಡ ಗಜಲ್ ಕೇಟಂಡ್, ಬಿರಿಯಾನಿ ತಿಂದಂಡ್
ಕೊಂಡಾಡಿಯಂಡ್, ಈ ಭರತ ಭೂಮಿಲ್
ನಿಂದ್ ಪಾಡಿಚಿ ವಂದೇಮಾತರಂ ವಂದೇಮಾತರಂ.

"ಜೈ ಹಿಂದ್"

- ಕಾರೋಟಿರ ಶಶಿ ಸುಬ್ರಮಣಿ, ಪಾಲಿಬೆಟ್ಟ





ಅರೆ ಭಾಷೆ ಪದ್ಯ

## ಹೂ ಮಳೆ


ಕತ್ತಲೆ ಕೋಂಬರೆಲಿ ಕಟ್ಟಿ ಇಸಿಯೊಳೆ
ಕನಸ್ ಬೀಜನ ಬಿತ್ತಿ ತೆಗ್ದ ಬೆಳೆನ
ಬುಡಿಕಾಗದ್ ಅದ್ನ ಹಂಗೇ ಜಳ್ಳಾಕೆ
ನ್ಯಾಯ ಸಿಕ್ಕುದುಲೆ ನಾ ಪಟ್ಟ ಶ್ರಮಕೆ.

ಕೆಸರ್ ಕಾಲ್‌ಲಿ ಹಸುರು ಕಾಂಬಕೆ
ತೆನೆ ತೆನೆಲಿ ಭತ್ತ ಉಸುರು ಬಾಚಿಕೆ
ಮಳೆ-ಗಾಳಿಗೆ ಆತ್ ಮೈಯೆಲ್ಲಾ ಚೆಂಡಿ
ಹಗುರಾತ್ ನೋಡ್ಕನ ತುಂಬಿದ ಗಾಡಿ

ಏರಿಳ್‌ತ್ ಬೆಲೆ, ನೆರ್ದಾತ್ ತಲೆ
ಲೆಕ್ಕಾಚಾರದ ಬದ್ಕು ಸುಖ ಕಂಡತ್‌ಲೆ
ಹಂಗೇ ಹಣ್ಣಾತ್, ಬೇನೆಲಿ ಬೆಂಡಾತ್ ಜೀವ
ನಂಗೇ ಗೊತ್ತಾತ್ಲೆ ನನ್ನೊಳಗುಟ್ಟು ಭಾವ.

ಸಂಜೆ ಹೊತ್ತ್‌ಲಿ ಕುದ್ದ್‌ಕಂಡ್ ಗ್ಯಾನ ಮಾಡ್ಕನ
ಮುಚ್ಚಿಕಾತ್ಲೆ ಸೋರ್ತಿದ್ದ ಸುಖದ ಕೊಮ್ಮೆನ
ಹೂಮಳೆ ಕಂಡದೆ ಹೊರಗೆ ಬಂದರೆ
ಹಂಗೇ ಕುದ್ದರೆ ಬದ್‌ಕ್ ಬರಡಾದೆ....

- ಕೊಟ್ಟಕೇರಿಯನ ಲೀಲಾ ದಯಾನಂದ, ಮಡಿಕೇರಿ



# ಕುಲಗೆಟ್ಟ ವ್ಯವಸ್ಥೆ

ಏನಾಗುಟ್ಟು ನಿಂಗೆ ಓ ಪ್ರಜಾಸತ್ತೆ
ಎಲ್ಲಿ ನೋಡಿರೂ ಬರೀ ಅವ್ಯವಸ್ಥೆ
ಆಳವುಕು ವಿರೋಧಿ ಪಡೆಗಳಿಗೂ
ಮುಗಿಯದ ಜಗ್ಗದ ಜಟಾಪಟಿ

ಚುನಾವಣೆ ಹೊತ್ತಿಗೆ ಮೀಯಿಸುವೆ
ಎಲ್ಲರ ಭರವಸೆಗಳ ತುಂಬು ಹೊಳೆಲಿ
ಅಮಲು ಇಳ್ದದೆ ಇದೆಲ್ಲ ಮುಗ್ದಂಗೆ

ತಕ್ಷಣ ಶುರಾದೆ ಇವರ ಸಣ್ಣಾಟ
ದೊಡ್ಡ ದೊಡ್ಡವರ ಹುಡುಗಾಟ
ಮುಕ್ತಾಯ ಕಾಣದ ಪರಸ್ಪರ ಕಿತ್ತಾಟ
ನಿತ್ತ್ ನೋಡುವ ನಮಗೆ ಪೇಚಾಟ

ಹೆದ್ದಾರಿ ಈಗಿವುಕೆ ಕಿರಿ ಕಿರಿಯ ದಾರಿ
ಕಾಲ್ದಾರಿ ಒಳದಾರಿಗಳಾದೆ ಲಾಭದ ದಾರಿ
ಹಗ್ಲ್ ಹೊತ್ತೇ ಬೇಕಾದೆ ಸೂಟೆ
ನಮ್ಮ ದಾರಿನ ನಾವ್ ಕಂಡ್ ಕಣಿಕೆ.

- ಕುಲ್ಲಚಾನ ಕಾರ್ಯಪ್ಪ, ಕುಂಬಳದಾಳು



# ಹೆಣ್ಣ್

ಕೊಡಗ್ ಸಂಸ್ಕೃತಿನ ಹೆಣ್ಣ್
ಭಾರತ ದೇಶದ ಕಣ್ಣ್ ||2||

ಗಂಡನ ಕಳ್‌ಸಿದೆ ದಂಡಿಗೆ
ಇವುಳಾದೆ ಶ್ರೀರಕ್ಷೆ ಮನೆಮಂದಿಗೆ

ಇವುಳೆ ಮನೆಯವುಕೆ ಸಂತೃಪ್ತಿ
ಬಂದವುಕೆ ಆದರದ ಪ್ರೀತಿ.

ಕಾವೇರಿ ತಾಯಿಯಂಗೆ
ಇವುಳು ಗಂಡನಮನೆ ಸಿರಿಗಂಗೆ

ಸೀತೆ ಸಾವಿತ್ರಿಯಂಗೆ
ಬದ್‌ಕಿದೆ ಬಾಳ್‌ನ ಗೋಳ್‌ನ ನುಂಗಿ

ವಿದ್ಯಾವಂತೆ, ಧೈರ್ಯವಂತೆ
ಇವುಳು ಬದ್‌ಕ್‌ನ ಸಿರಿದೇವತೆ

ಸಂಸ್ಕೃತಿಗೆ ಹೆಸರಾದ ರೂಪ
ಇವುಳೇ ಸಮಾಜಕ್ಕೆ ದಾರಿದೀಪ

ಕೊಡಗ್ ಸಂಸ್ಕೃತಿನ ಹೆಣ್ಣ್
ಭಾರತ ದೇಶದ ಕಣ್ಣ್ ||2||

**- ಪ್ರುದಿಯನೆರವನ ರೇವತಿ ರಮೇಶ, ಮಡಿಕೇರಿ**



# ಕಾಯ್ತಾವಳೆ ಅವುಳಿಗಾಗಿ...

ಕಳ್ದ್ ಹೋವುಟು ಗೆಳತಿ
ಎಲ್ಲಿಗೆ ಹೋವುಟು ಗೊತ್ತ್ಲೆ
ಹೆಂಗೆ ಉಟ್ಟು ತ ಗೊತ್ತ್ಲೆ
ಅವಳ ಗೇನಲಿ ಮಾತ್ರ
ದಿನನೂ ನಾ ಸಾಗ್ತಾವಳೆ.....

ನಾ ಸಾಗ್ತಿರುವ ದಾರಿ
ಎಲ್ಲಿ ಮುಟ್ಟಿತಾ ಗೊತ್ತ್ಲೆ
ನನ್ನ ಗೆಳ್ತಿ ನಂಗೆ
ಸಿಕ್ಕಿದೆತನೂ ಗೊತ್ತ್ಲೆ

ನನ್ನೆಲ್ಲಾ ಕಷ್ಟಗಳಿಗೆ ಮಿಡಿತಿತ್ತ್
ಅವಳ ಹೃದಯ ಅಂದ್
ಗೊತ್ತಿಲ್ಲದೆ ಕಣ್ಣಂಚ್ಂದ
ಹರ್ದಿತ್ತ್ ಕಣ್ಣೀರ್ ನೊಂದ್.

ಅವುಳು ಕೊಟ್ಟ ಉಡುಗೊರೆನೇ
ನಂಗೊಂದ್ ಗ್ಯಾನದ ಗುರ್ತ್
ಇಬ್ಬರ ಗ್ಯಾನಗ ಸೇರಿಕಂಡುಟ್ಟು
ಅದರ್ಲಿ ಹೋಗದಂಗೆ ಮರ್ತ್.

ಒಂದೇ ಬೆಂಚ್ಲಿ ಕುದ್ದ್
ಮಾತಾಡ್ವ ಆ ದಿನಗ
ಒಂದೇ ಬಟ್ಲ್ಲಿ ಹಂಚಿತಿಂದ
ರುಚಿ ರುಚಿಯ ಆ ಊಟ
ಹೆಂಗೆ ಮರಿಯಲಿ ಗೆಳ್ತಿ
ಆ ಮರಿಯಕ್ಕಾಗದ ಕ್ಷಣಗ...

ಹೈಸ್ಕೂಲ್ಲಿ ಇಬ್ಬರೂ ಬುಟ್ಟ್ ದೂರಾದೊ
ವಿಳಾಸ ನಂಬರ್ ತಕಣೆಕೆ ಮರ್ತ್ತೋದೊ
ಅಂದರೂ ಅವುಳು ಸಿಕ್ಕಿದೇತ ಒಂದ್ ನಂಬಿಕೆ
ನಮ್ಮಿಬ್ಬಿರ ಸ್ನೇಹ ಸೋಲದೆ ಗೆಲ್ಲಿಕೆ.

- ಕಾಡ್ಲೇರ ಜಯಲಕ್ಷ್ಮೀ ಮೋಹನ್ ಕುಮಾರ್, ಬೆಟ್ಟಗೇರಿ



ಕುಂಬಾರ ಭಾಷೆ

# ನೀರು


ಹೆಸರ್ ತುಂಬೆ ಇದ್ದಡೆನೂ
ನೀರ್ ಒಂದೇ
ಬೆಟ್ಟಗುಡ್ಡವಾಗೆಲಿ
ಹರಿತ ನೀರ್ ಒಂದೇ.

ಹುಟ್ಟು ಸಾವುನ ನಡುವೆ
ಬೇನೆ, ಕುಸಿಯ ನಡುವೆ
ಪ್ರಾಣಿಯಾಗೆಲಿ, ಪಕ್ಷಿಯಾಗೆಲಿ
ಕುಡಿತ ನೀರು ಒಂದೇ.

ಎಲ್ಲೇ ಇರಲಿ ಎಂಗಯೆ ಇರಲಿ
ಆರೋಗ್ಯಯಿ ನೀರೇ ಸೀಮಿತ
ಚಿಯೆಯಾಗೆಲಿ, ಕೈಕೆಯಾಗೆಲಿ
ಆಳ್‌ತಾದಡೆನೂ ನೀರೇ ಅಮೃತ.

ಬಡವರಾಗೆಲಿ, ಶ್ರೀಮಂತರಾಗೆಲಿ
ಪ್ರೀತಿಂದ ಕೈ ಚಾಚಿ
ಕೇಣತೊಂದೆಡೆ ಸಾಯೆ
ತಿಮುಟೊ ಒಂದು ತೊಟ್ಟು ನೀರ್.

- ಹೆಚ್. ವಿ. ಸುನೀತ ವಿಶ್ವನಾಥ, ಬೆಟ್ಟಗೇರಿ




ಮಳೆಯಾಳಿ ಕವನ


# ಯಕ್ಷಿ ಪರಂಬ್

ಒತ್ತಿರಿ ಒತ್ತಿರಿ ಮುನ್ನೋಟು ಪೋಯಿನಾಂ
ಚಕ್ರವಾಳಂಙ್ಙಳ್ಕು ಮಪ್ಪುರಂ ಕಂಡೆತ್ತಿ
ಚಂದ್ರನುಂ ಚೊವ್ವಯುಂ ಮಟ್ಟು ಗ್ರಹಂಙಳುಂ
ನಂಮ್ಮಳ್ ನಿರೀಕ್ಷಿಚ್ಚಡಕ್ಕಿ ಪಿಡಿಚಿನ್ನ್
ಇಂಟರ್‌ನೆಟ್ ಈ-ಮೈಲ್ ಕಂಪ್ಯೂಟರ್ ವಿಪ್ಲವಂ
ಚಿಂದಗಳ್ ಕಪ್ಪುರಂ ವಿಸ್ಮಯಮಾಕಿ ನಾಂ
ಸೇಟ್‌ಲೈಟ್ ಚಾನಲ್ ಕುಸುರುದಿಗಳ್ ಚಿಪ್ಪುಗಳ್
ಚಾಟ್ ಚೈದು ಬೀಟ್ ಚೈದು ಉರಿವಿಯೆ ಚೀಟಾಕಿ
ಎನ್ನಿಟುಂ ಎನ್ನಿಟುಂ ಎಂದೇ ಮನಸಿಲ್ ನೀ
ನ್ನೆಂಙ್ಙೋಟುಂ ಪೋಯಿಲ್ಲ ವರ್ಗ ವಿದ್ವೇಷಂಙಳ್
ಎತ್ರನಾಳಾಯ್ ಮತಜಾತಿ ವರ್ಗಾಣುಕಳ್
ಯಕ್ಷಿಯಾಯ್ ಚುಟ್ಟಿವನ್ನುಮ್ಮ ವಚ್ಚೀಡುನುಂ
ಸ್ತ್ರೀಯುಂ, ಪುರುಷನುಂ ಲಿಂಗ ಬೇದಂಙಳಿಲ್
ಜಾತಿ, ರಂಡಾಯಿ ಪಿರಿಯುನ್ನು ಭೂಮಿಯಿಲ್
ಪಕ್ಷಿ ಇವಿಡೆ ಜನಿಚ್ಚಲರೀಡುನ್ನು
ಸತ್ಯ ನಿಮಿಷತ್ತಿಲ್ ನೂರಾರು ಜಾತಿಗಳ್
ಅಪ್ಪುವುಂ, ಮಮ್ಮದುಂ, ಮೈಕಳುಂ, ಜಾತಿತನ್
ನಿತ್ಯದುರಿತತ್ತಿನ್ ದುಃಖಂಙಳಾಕವೆ
ಯೋನಿ ಲಿಂಗಂಙ್ಙಳ್‌ಕು ವೇದಾಂತವೋದುನ್ನು
ನೀಳೇ ಮತತ್ತಿನ್ ಪ್ರವಾಜಕ ಪೇಕೋಲಂ
ಗರ್ಭ ಗೇಹಂಙ್ಙಾಳಿಲ್ ಛಿದ್ರಂ ನಡತ್ತುನ್ನು
ಶುದ್ಧ ಭೂತಂಙಳೆ ಅಂದಗಾರಂಙಳಿಲ್
ಪುಕ್ಕಿಳ್ ಕೊಡಿ ಅರ್‌ತ್ ಅಮ್ಮ ಎರಿಯುನ್ನು

ಮೊಟ್ಟಿನೆ ಪಟ್ಟಿಕಳ್ ಸದ್ದೆಯಾಯ್ ತೀರ್ಕುನ್ನು
ಯೆತ್ರೆ ಪಿರಗೋಟು ಪೋಯಿ ತಲಮುರ
ನಿಲ್ಕುನ್ನು ಜಾತಿ ಮತಸ್ಮಶಾನಂಜ್ಞಳಿಲ್
ನಿಲ್ಕಾಂ ಪಿಶಾಚಿನ್ ಪಿಡಿವಿಡಿವಿಚ್ಚು ನಾಂ
ತುಲ್ಯರಾಯ್ ತೀರುನ್ನ ಕಾಲತ್ತಿ ನಿಪ್ಪುರಂ
ಕೊಂದಯುಂ ಪೂನೂಲುಂ ನಿಸ್ಕಾರ ವಸ್ತ್ರವುಂ
ವೆಂದೆರಿಯುನ್ನ ಚಿತೆಯೊರುಕ್ಕಿ ಕೊಡುಂ
ಮಂಞಿಂಡೆ ತಾಳ್ವರ ಪೂಪಂದಲಿಲ್ ಜನ
ಮೊನ್ನಿಚೊರೇ ಜಾತಿ ಎನ್ನೊನ್ನು ಪಾಡುವಾನ್
ಚಕ್ರವಾಳಂಜ್ಞಳಿಲ್ ಸ್ನೇಹ ಸಿಂದೂರತ್ತಿನ್
ಪೊಟ್ಟು ಕುತ್ತಿ ಒರೇ ಜಾತಿಯಾಯ್ ತೀರ್‌ನಿಡಾಂ.

**- ದೇವಿದಾಸ್ ಕೆ.ವಿ., ಗೋಣಿಕೊಪ್ಪಲು**





ತುಳು ಕವನ

# ಇಪ್ಪೊಡು ಇಂಚ

"ಇಪ್ಪೋಡು ನಮ ಮಾತ ಇಂಚ
ತೂಲೆ ಈ ಪುರುಬಾಲೆದ ಅಂಚ

ಎಂಚಿನ ತೆಲಿಕೆ, ಎಂಚಿನ ಮೋಕೆ
ಜೋರ್ ಮಲ್ತ್ಂಡ ತೂಪಿ ಆ ಕಣ್ಣ್ದ ಬಯಕೆ
ಬುಲ್ಪುನಗ ಬರ್ಪಿ ಆ ಪೊರ್ಲುದ ಪಾತೆರ
ಕೋಪೋ ಪನ್ಪಿ ಕೊಡೆಕ್ಕಾಪುಂಟು ನೂದು ರಂಧ್ರ.

ಕಿನ್ಯ ಬಾಲೆ ಬುಲ್ತುಂಡ ವೀಣೆ ನುಡಿತಿನ ಲೆಕ್ಕ
ತೆಲ್ತ್ಂಡ ಕಲ್ಲ್ ಸಕ್ಕರೆ ತುಂಡು ಚೀಪಿನ ಬುಕ್ಕ
ಉರ್ಬುಲಿ ಉಂತ್ಂಡ್ಲಾ ಅವು ಬಾಲಕೃಷ್ಣನವೇ ರೂಪೋ
ಇಲ್ಲಾಡ್ತಕ್ಲೆನ್ ಮಾತಾ ನಲಿಪಾವುನ ಪೊರ್ಲು ನಂದಾದೀಪೋ

ಕಿನ್ಯ ಬಾಲೆತ ಪಾತೆರೋ ಎಂಚಿನ ವಿಸ್ಮಯೋ
ಮೊಗೆ ಮೊಗೆದ್ ಮಯ್ಪಿ ನೀರ್ದ ಧಾರೆಯೋ
ನಡಪ್ಪುನ ಗೌಜಿಡ್ ಬೂರ್ದ್ ಬಲ್ಪುನಗ ಬಾರೆ
ರಡ್ಡ್ ಕಣ್ಣ್ಡ್ಲಾ ಪರಪ್ಪುಂಡು ಕನನೀರ್ದ ಧಾರೆ

ತೆಲಿಪಿನ ಬಾಲೆ ಇಲ್ಲ್ದ ಸಂತೋಷದ ಪಾತೆರ
ಬಾನೋಡು ಮಿನುಗುನ ನಕ್ಷತ್ರದಲೆಕ್ಕ ಸಂತೋಷದ ತೆರ
ಕಾಲಧರ್ಮನ ಅರಮನೆಡ್ ಅರಳುನ ಪೂವಾದ್
ಬಲ್ಲ ಈ ಜನಕುಲೆಗ್ ಮಾತಾ ಖುಷಿ ಪಂಡ್ದ್.

ಹಾಳಾವೊಂದಿಪ್ಪುನ ಪ್ರಕೃತಿನ ತಾಪ ನಿಕ್ಕ್ ತಟ್ಟಂದಿಪ್ಪಡ್
ನೆಯಿಟ್ ಕೂಜಾಲ್ ದೆತ್ತಿನ ಲೆಕ್ಕ ನಿನ್ನ ಬಾಳ್ವೆ ಸಾಗಡ್
ನಿನ್ನ ಜೀವನ ಪೂರಾ ಉಪ್ಪಡ್ ದಿಂಜಿಂಚಿ ಪ್ರೇಮ
ಬರಡ್ ಏಪಲಾ ಎಡ್ಡೆ ದಿನೊಕುಲು ನಿನ್ನ ಬದ್ಕ್ಡ್ ಅನುಪಮಾ

ಇಪ್ಪೊಡು ಇಂಚ ಪುರುಬಾಲೆತ ಲೆಕ್ಕ
ಈ ಜಗತ್ತ್ಡ್ ಪಾಪೋ ಏಪೋಲ ತಟ್ಟಂದಿಲೆಕ್ಕ!

- ನೀರಬಿದಿರೆ ನಾರಾಯಣ, ಮಡಿಕೇರಿ



# ಬಲೆ ದಸರೋಗು

ಬತ್ತ್‌ಂಡ್ ದಸರಾ ಬತ್ತ್‌ಂಡ್ ದಸರಾ .
ವರ್ಷೋ ವರ್ಷೋಲ ಬರ್ಪಿನ ದಸರಾ

ಆದಿ ಶಕ್ತಿದ ಮಹಿಮೆನ್ ಸಾರೊಂದು
ಜ್ಞಾನ ಶಕ್ತಿದ ಉದಿಪನೋ ಕೊರೋಂದು

ಬೆನ್ನಿ ಬೇಲೆನ್ ಬೆಳಗಾದ್
ಉಡಲ್ ಬೇನೆ ಬೆಸರ್‌ನ ಕಲೆಪಾದ್

ದೇವಿ ಬರ್ಪಲ್ ದೇವಿ ಬರ್ಪಲ್
ನಿಧಿತ್ತ ಕದಿಕೆನ್ ಕನಪಾಲ್

ಸೋಲು ಸೋಲುಂದ್ ಬಡವು ಡಿಪ್ಪೆರೆ
ದೇವಿ ಬರ್ಪಾಲ್ ಬಡವು ತನಿಪ್ಯೆರೆ

ಮನಸ್ಸ್ ನಿಲಿಕೆ ಮೋಕೆ ಇಪ್ಪಾಡ್
ಮನುಷೋತ್ಸಗು ಬಿಲೆ ಇಪ್ಪಾಡ್

ದುಷ್ಟ ವಿಚಾರೊಡು ತಪ್ಪು ಇತ್ತ್‌ಂಡ್‌ಲ
ಸಾರ ಪಗೆ ಇತ್ತ್‌ಂಡಲ

ದಸರಡೊರ ರಾಜಿ ಆಪೆರ್-ರಾಜಿ ಆಪೆರ್
ಧರ್ಮತತ್ತ್ ಪೋಪಿನಕ್ಲೇನ ಕೈ ಪತ್ತ್ ಒಯಿಪಾಲ್

ನಷ್ಟ ಆವಾಂದಿನಂಚ ತತ್ತಿ ಮನಸ್ಸ್‌ನ್ ಕಾಪುವಾಲ್
ವರ್ಗೊ ಕುಟುಂಬೊ ಮಸ್ತ್ ಆಂಡಲ

ಒಂಜೆ ದೇವಿ, ಒಂಜೆ ಭಕ್ತಿ, ಒಂಜೆ ನಡತೆ, ಸತ್ಯ ಧರ್ಮ
ಒಂಜೆ ಆಸೆ, ಪ್ರೀತಿ ಮನಸ್ಸ್ ನಾಡ್‌ಗಾದ್ ಒರಿಯಾಡ್

ಬಲೆ ದಸರೋಗು ಬಲೆ ದಸರೋಗು
ದೇವಿ ಬರ್ಪಾಲ್ ಮಹಿಮೆಡ್.

**- ಬಿ.ಎಂ. ವಾಸು ರೈ, ಮಡಿಕೇರಿ**



# ಸೊರ್ಕುದ ಗೋಣೆ !!!


ಅಲಾ... ಅಲಾ... ಬತ್ತ್ಂಡ್ ಸೊರ್ಕುದ ಗೋಣೆ
ಬೀಲ ಮಿತರಾಂಡ್
ಒರ್ದಾ ಮುಸುಂಡುಡು ತರೆ ಬಗ್ಗಾಂಡ್
ಪೊಲಿತ್ತ್ಂಡ್... ತಾಡ್‌ದ್
ಎಲ್ಯ ಪೊಡಿ ದೈಕ್ಲೇನ್ ಯಾನೆ ಆನೆ ಪಂದ್.

ಭೂಮಿ ಅಪ್ಪೆನೆ ನಡ್ಗಾವೆ ಪಂದ್ ಲಾಯ್ತ್ಂಡ್
ಬಾಣೇಡ್ ಗೊಬ್ಬುನ ಜೋಕ್ಲೇನ್ ಗಿಡತ್ತ್ಂಡ್
ಯಾನೆ ಕಲಿಯುಗೊತ ವೀರೆ ಪಂದ್
ಕೈಕಂಜಿಲೇನ್ ಬೆರಿ ಪತ್ತ್ಂಡ್ ಎನ್ನೆದುರು ಏರ್ಲಾ ಇಜ್ಜಿಂದ್...
ಅರೆದ್ದ್ಂಡ್ ಆನಿ ಯಾನೆ ಮಹಿಷಾಸುರೆ ಆದಿತ್ತೆಂದ್

ಇನಿ ಪಿರಾ ಬತ್ತೆ ಲೋಕ ಸಂಹಾರ ಮಲ್ಪೆರೆಂದ್...
ನೆಲ ತೂವಾಂದೆ ಬಾನೋನೆ ತೂವೊಂದು ಬೂರ್ಪಾವೆ ಇಡೀ ಬಾನೋನು
ಅಯಿಟ್ಟಿತ್ತಿ ನಕ್ಷತ್ರೊಲೇನ್ ಮಾಲೆ ಮಲ್ತ್ದ್ ಸೂರ್ಯನ್ ಒಟ್ಟು ಸೇರ್ಸಾದ್
ಕೆಕ್ಕಿಲ್ಗ್ ಪಾಡೋನ್ಪೆ ಪಂದ್ ಸೊರ್ಕುಡ್ ಲಾಯ್ತೊಂದಿತ್ತಿನ ಗೋಣೆ
ಅವುಲೇ ಇತ್ತಿನ ಎಲ್ಯ ಕಣೆಕ್ ಕಾರ್ ಪಾಡ್ದ್.

ಪೊಲಿತ್ತೋಂಡು ಕಾರ್‌ನ್
ಲಕ್ಕರಾವಂದೆ ಏರಾಂಡಲ ಬಲೇ ಪಂದ್ ಅರೆದ್ದ್ಂಡ್
ಗೋಣೆ ಗಿಡತ್ತ್ದ್ ಬಲಿತಿತ್ತಿನ ಜೋಕುಲು
ಪಿರಾ ಬತ್ತ್ದ್ ಗೋಣನ್ ಮಿತರಾಯೆರ್
ಕೈಕಂಜಿಲು ಮುಗ್ಧ ಮೋರೆಡ್ ಇಂದೇನ್ ತೂವೊಂದಿತ್ತೋ....!!!

**- ಶಿವಪ್ರಕಾಶ್ ಅರ್ವತ್ತೊಕ್ಲು, ಮಡಿಕೇರಿ**



ತೆಲುಗು ಕವನ

# ನೇನೂ ಮನಿಷಿ ಕದಾ!

ನೇನು ಅಂಟಾರ್ಟಿಕಾ ಗುಂಡೆ ಗದಿಲಾಂಟಿ
ಘನೀ ಭವಿಂಚಿನ ಮಂಚು ಏಕಾಂತಲೋಕಿ ವಲಸಪೋಯಾನು
ಊಹೂ| ನೇನೂ ಮನಿಷಿ ಕದಾ!

ಆ ಕೋನಲೋ ತಿಮಿಂಗಲಂಲಾ ಖಾತರು ಚೆಯ್ಯಕ
ಸ್ತ್ರೀ ಸಮುದ್ರ ದೇಹಂಲೋ ಮುನಿಗಾನು
ಊಹೂ| ನೇನೂ ಮನಿಷಿ ಕದಾ!
ದುಃಖ ಜಲಪಾತಧಾರಾಲ ಕಿಂದ
ನಿಶ್ಚಲ ಶಿಲಲಾ ಬಾಸಿಂಪಟ್ಟು ವೇಸಾನು
ಊಹೂ| ನೇನೂ ಮನಿಷಿ ಕದಾ!

ಗಾಲಿನಿ ಚಿಲಕಿ ತೀಸಿನ ವೆನ್ನ ಮುದ್ದಲಾ ಸಂಗೀತಾನ್ನಿ
ನಾ ನಿಲುವೆಲ್ಲಾ ಪೂನುಕುನ್ನಾನು
ಊಹೂ! ನೇನೂ ಮನಿಷಿ ಕದಾ!
ಕಾಲಂರಾತಿ ಮೀದ ಹೃದಯಾನ್ನಿ ಅರಗದೀಸುಕುನ್ನ
ಸ್ನೇಹ ಚಂದನ ತೈಲಾಲತೋ ತಲಂಟುಕುನ್ನಾನು
ಊಹೂ! ನೇನೂ ಮನಿಷಿ ಕದಾ!
ಪ್ರಪಂಚ ಕುಟೀರಂ ಚುಟ್ಟೂ
ಪುನ್ನಮಿವೆನ್ನೆಲತೋ ತಡಿಕೆನು ಕಟ್ಟುಕುನ್ನಾನು
ಊಹೂ! ನೇನೂ ಮನಿಷಿ ಕದಾ!

ಪ್ರವಕ್ತುಲು ತಲೋವಲುಕೂ ರಗಲ ಚೇಸಿನ
ಚಿಂತನಿಪ್ಪುಲ ಮೂಟನು ನೆತ್ತಿನುಂಚಿ ಮಿದುಲ್ಚುಕುನಿ
ಪ್ರಕೃತಿ ಪೊತ್ತಿಳ್ಳಲೋ-ಪಶುವುಲಾ, ಶಿಶುವುಲಾ ಪೇದ ದೀರ ಬೋಯಾನು
ಊಹೂ! ನೇನೂ ಮನಿಷಿ ಕದಾ!

ನಾಲೋ ಮೊಲಕೆತ್ತಿ ಪದಿದಿಕ್ಕುಲಕೂ ಪಾಕುತುನ್ನ
ಅಗ್ನಿ ಬೀಜಂ ಅಜೇಯಂ! ಅನಂತಂ!
ನಾ ತುದಿ ಊಪಿಂದಾಕಾ ನನ್ನು ಸಹಿಂಚೆ
ನಾತೃಷ್ಣಾಗ್ರತ ಅಕ್ಷಯಂ.

- ಸಬಲಂ ಭೋಜಣ್ಣ ರೆಡ್ಡಿ, ಕುಶಾಲನಗರ



# ಚುಟುಕುಗಳು

*ಹುದ್ದೆ*

ಸಿಕ್ಕಿತು ನನಗೊಂದು ಸರ್ಕಾರಿ ಹುದ್ದೆ
ಕುರ್ಚಿ ಬಿಸಿಮಾಡಿ ಮಾಡಿದೆನು ಭರ್ಜರಿ ನಿದ್ದೆ
ಒಂದು ದಿನ ಅಧಿಕಾರಿಗಳಿಗೆ ನಾಸಿಕ್ಕಿ ಬಿದ್ದೆ
ಇದರಿಂದಾಗಿ ಹೋಯಿತು ನನ್ನ ಹುದ್ದೆ.

*ಪ್ರಾಣ ಸಖಿ*

ನನ್ನವಳು ರೂಪದಲ್ಲಿ ಯುಕ್ತಾ ಮುಖಿ
ನಗುವಲ್ಲಿ ಸದಾ ಹಸನ್ಮುಖಿ
ಕೋಪ ಬಂದಾಗ ಆಗುವಳು ಶೂರ್ಪನಖಿ
ಆದರೂ ಅವಳೇ ನನ್ನ ಪ್ರಾಣ ಸಖಿ

*ಅಹಂಕಾರ*

ಜಗತ್ತಿಗೆ ಬೆಳಕನ್ನು ನೀಡುವ
ಸೂರ್ಯನಿಗೆ ಇಲ್ಲ "ಅಹಂಕಾರ"
ಗಾಳಿ ನೆರಳು ನೀಡುವ
ಮರಕ್ಕೆ ಇಲ್ಲ 'ಅಹಂಕಾರ'
ಆಸ್ತಿ ಸಂಪತ್ತು ನೀಡುವ
ಭೂಮಿಗೆ ಇಲ್ಲ 'ಅಹಂಕಾರ'
ಇವೆಲ್ಲವನ್ನು ಅವಲಂಬಿಸಿ
ಜೀವಿಸುವ ಮನುಷ್ಯಾ
ನಿನಗೇಕೆ ಈ 'ಅಹಂಕಾರ'??

*ಬಂತು ಕ್ಲಾಸಿನಲ್ಲಿ ನಿದ್ದೆ*

ಪಾಠದ ಕಡೆ ಗಮನ ಕೊಡದೆ ಇದ್ದೆ
ಪರೀಕ್ಷೆಯಲಿ ಬರೆಯದೆ ಎದ್ದೆ
ಫಲಿತಾಂಶ ನೋಡಿ ತಲೆತಿರುಗಿ ಬಿದ್ದೆ

ಕೊನೆಗೆ ಸಿಗಲಿಲ್ಲ ಯಾವುದೇ ಹುದ್ದೆ
ಕಾಯುತ್ತಿತ್ತು ನಮ್ಮನೆಯ ಗದ್ದೆ

*ಬದುಕುವ ಕಲೆ*

ಬದುಕು ಒಂದು ಕಲೆ
ಇದನ್ನು ತಿಳಿದವನು ಭಲೆ
ಇದರಲ್ಲಿರುವುದು ಹಲವಾರು ಅಲೆ
ಈಜಿ ದಡ ಸೇರಿದವನೇ ಭಲೆ

*ಜೀವನ*

ಜೀವನ ಒಂದು ನಾಟಕ
ವಿಧಿ ಅದರ ನಾಯಕ
ಮನಸ್ಸು ಅದರ ನಿರ್ಮಾಪಕ
ಮರೆಯಬೇಡ ಜೀವನವೆಂಬ ರೂಪಕ

ಜೀವನವೆಂಬ ನಾಟಕ
ಬ್ರಹ್ಮ ಇದರ ಲೇಖಕ
ಮನುಷ್ಯನಿಗಿಲ್ಲ
ಸಾಯುವ ತವಕ
ಅದಕ್ಕಾಗಿ ಮಾಡಿದ
ಯಮನನ್ನು ನೇಮಕ

*ಎಲೆಕ್ಷನ್*

ಐದು ವರ್ಷಕ್ಕೊಮ್ಮೆ ನಡೆಯುತ್ತೆ ಎಲೆಕ್ಷನ್
ಗೆಲ್ಲಲು ಮಾಡುತ್ತಾರೆ ಅನೇಕ ಆಕ್ಷನ್
ಯಾರೋ ಒಬ್ಬರು ಆಗ್ತಾರೆ ಸಲೆಕ್ಷನ್
ಆತ ಮಾಡ್ತಾನೆ ತುಂಬಾ ಕಲೆಕ್ಷನ್
ಇವರೇ ಇಂದಿನ ಪೊಲಿಟೀಶಿಯನ್!

**- ಎ.ವಿ. ಮಂಜುನಾಥ್, ವೀರಾಜಪೇಟೆ**

# The Power of the Invisible



Ages may surpass,
I shall never from you depart;
You ceaselessly toss
Me as a new life apart;
From one wrought to another bound start.

I am like a wave
In your magnanimous ocean;
That rush and rave
Towards the shore in tidal motion;
Only to be drawn aback and sent again ashore.

Though having not
Seen you, or so ablivion of
Your sight, I shan't
Let my invocation cease off;
Nor my ritual will start without your chant.

Vast is the ocean
That my vision can't cover;
Nothing can lessen
Manya star in the skies that glitter;
No one can measure the power of the invisible.

Years run across
The limitless time in your span;
Ages may surpass,
I live on and perish by you passion;
But my affiliation with you shall never stop

**- Subbaiah M.S., Virajpet**

***About the poem***

This poem flared up in me in gratitude for John Donne's Poem "Batter My heart" which revolves round the theme of Death and Rebirth. My poem has similar theme as John Donne's and is addressed to God and his supreme powers.

English Poems

# We Surely will succeed



My heart skips a few beats in series whenever I hear
The swindling death toll, so claimed by the Swine flue,
And the whole world is already grappled with fear,
That the way to wipeout the disease is still without clue.

Whenever the threat from such deadly diseases emerge,
Like plague and Anthrax, rearing their ugly head,
All over the world, the sicken souls desperately urge
To evolve a solution to curb the menance of the dread.

So illusive and devastating is the pandemic that
A pall of gloom with anxiety continues to descend
And those who bear the brunt, even begin to suspect
If ever this malicious menance be put to an end!

No sooner do the ailments disappear without effort
Than the Medicos claimed they weathered the storm,
Unaware of those unknown diseases that would manifest
With the enhanced immunity to better in a newer form.

If accepting the defeat as a challenge despite the set back,
While leaving no stone unturned to stifle the anxiety
surely, one day a ray of success will emerge on track,
To wriggle out from the pandemic to revive the humanity.

**- Kiggal S. Gireesh, Murnad**

# 'Ever Green Teacher'



The quality of Teaching is not strained.
It droppeth as the Gentle rain from heart.
Upon the place beneath, it is full blessed.
It blesseth than that Gives and students that takes.

The mightest teaching is the mightest it becomes.
The thorned syllabus, better than good teacher.
Her Seapter showes the force of temporal power.
The attribute to ' awe' and majesty,
Where in doth sit the dead and fear of teacher.

But mercy above this Secptred away.
It is enthroned in the hearts of teacher.
It is an attribute to god himself.

And control power doth then show the career
When mercy and efforts justice the result.

**- Thekkada Gulabi Janaradhan,**
**Madenadu**





# Flower

***Flower.......***

You are so beautiful
The brightness is wonderful
Your lovely colours
Make me feel jealous.

Every day I look at you
God has given such a gift to you
You spread your fragnance around
When I look at you,
You feel proud.

I'm fascinated by you
I wish I could be you.
When I feel sad
I look at you
I pray god for
Your happiness.


**- Monish. V.J, Madikeri**



# बादल की बारिश

आकाश में दिखाई दने वाले बारिश
सफेद हो था, काला बादल ।
क्यों आता नहीं बारिश
एक बार करो तो कोशिश ।
वसुन्दरा करती है, तुम्हारा इतंजार
बरसाना पानी हमारे कातिर ।
खेत में काम करेणा किसान
इस बारिश से होगा उनको आसान
इस से मिल जाते है फसल
खुश होते है, हम साल साल
क्यों आता नहीं बारिश
एक बार तो करो कोसिश ।

**- M.E. Monoj, Madikeri**



# ಕವಿತೆಗಳ ಸಾಲುದೀಪ

... ಯಾವ ಸಂಗತಿಯನ್ನು... ಯಾವ ಮಾಧ್ಯಮದ
ಮೂಲಕ ಹೇಳಿದರೆ ಚೆನ್ನ ಎಂಬ ತೀರ್ಮಾನ...
ಆ ಸಾಮರ್ಥ್ಯ ನಮ್ಮದಾದಾಗ...
ನಮ್ಮ ಮನದ ಭಾವನೆಗಳೇ ಎಲ್ಲರ ಭಾವನೆಗಳಿಗೂ
ತಾಕಿ.... ಹೌದಲ್ಲಿ ಎನಿಸಿದಾಗ ಆ ಪ್ರಯತ್ನ ಸಾರ್ಥಕ...
ಅಂತಹ ಎಳೆಗಳನ್ನು ಸೇರಿಸಿ... ಇಲ್ಲಿ ಕವನಗಳ
ಸಾಲು ದೀಪ ಹಚ್ಚಿದ್ದೇವೆ. ಈ ದೀಪದ ಬೆಳಕಿನಲ್ಲಿ
ಮತ್ತಷ್ಟು ಸುಂದರ ಜ್ಞಾನ, ಪ್ರಚೋದಕವಾದ ಸಾಲುದೀಪಗಳು
ಮುಂದುವರಿಯಲಿ...

ಮಡಿಕೇರಿ ದಸರಾ ಜನೋತ್ಸವ ಬಹುಭಾಷಾ ಕವಿಗೋಷ್ಠಿ ಸಮಿತಿ - ೨೦೧೦

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ